# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ಉತ್ತರ ಪ್ರದೇಶ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಕಾನ್ಪುರದಲ್ಲಿ ಹೊಸದಾಗಿ ನಿರ್ಮಿಸಲಾದ ಕೇಶವ ಭವನವನ್ನು ಲೋಕಾರ್ಪಣೆಗೊಳಿಸಿದರು. ಜೊತೆಗೆ ಡಾ. ಭೀಮರಾವ್ ಅಂಬೇಡ್ಕರ್ ಸಭಾಂಗಣವನ್ನು ಉದ್ಘಾಟಿಸಿ, ಡಾ. ಅಂಬೇಡ್ಕರ್ ಜಯಂತಿಯ ಪ್ರಯುಕ್ತ ಬಾಬಾ ಸಾಹೇಬರಿಗೆ ಪುಷ್ಪ ನಮನ ಸಲ್ಲಿಸಿದರು.


ಸಂಪುಟ : 47 | ಸಂಚಿಕೆ : 01 | ವಿಶಾಖ–ಜ್ಯೇಷ್ಠ | ಕಲಿಯುಗಾಬ್ದ 5127 | 01–05–2025 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


## ಐರೋಪ್ಯರ ಎದೆ ನಡುಗಿಸಿದ ಉಳ್ಳಾಲದ ವೀರರಾಣಿ ಅಬ್ಬಕ್ಕ

**■ ಪ್ರಕಾಶ್ ಮಲ್ಪೆ**

ಸುಮಾರು 230 ವರ್ಷಗಳ ಕಾಲ ತಮ್ಮ ಸಾಮ್ರಾಜ್ಯದ ಚತುಃಸೀಮೆಯೊಳಗೆ ಯಾವ ಆಕ್ರಮಣಕಾರಿಯನ್ನೂ ಬರಗೊಡದೆ ಅಜೇಯವಾಗಿ ರಾಜ್ಯಭಾರ ನಡೆಸಿದ ವಿಜಯನಗರ ಸಾಮ್ರಾಜ್ಯ 1565ರ ರಕ್ಕಸ ತಂಗಡಿ ಯುದ್ಧದಲ್ಲಿ ಸೋಲುಪ್ಪಿಕೊಂಡು ಪತನದ ಅಂಚಿನಲ್ಲಿತ್ತು. ವಿಜಯನಗರದ ಸಾಮರ್ಥ್ಯ ಕುಂದಿದೆ ಎಂದು ತಿಳಿಯುತ್ತಿದ್ದಂತೆ ಅಲ್ಲಿಯವರೆಗೆ ಬಾಲ ಮುದುರಿಕೊಂಡಿದ್ದ ಆಕ್ರಮಣಕಾರಿಗಳು ಮತ್ತೆ ಚಿಗುರಿದರು. ವ್ಯಾಪಾರಕ್ಕೆಂದು ಬಂದಿದ್ದ ಪೋರ್ಚುಗೀಸರು ಗೋವಾದಲ್ಲಿ ನೆಲೆಯೂರಿ ಕರ್ನಾಟಕದ ಕರಾವಳಿಯಲ್ಲಿ ಲೂಟಿ ಆರಂಭ ಮಾಡಿದರು. ಬಸ್ರೂರು, ಬಾರ್ಕೂರು, ಮಂಗಳೂರು ಸಹಿತವಾಗಿ ಕರಾವಳಿಯ ಬಂದರುಗಳನ್ನು ಸಂಪೂರ್ಣ ತಮ್ಮ ವಶಕ್ಕೆ ತೆಗೆದುಕೊಂಡರು. ತಮ್ಮನ್ನು ಒಪ್ಪದವರನ್ನು ಅತ್ಯಂತ ಕ್ರೂರವಾಗಿ ಹಿಂಸಿಸಿದರು, ಅಸಂಖ್ಯ ಅಂಗಡಿ, ಮನೆಗಳಿಗೆ, ತೆಂಗಿನ ತೋಟಗಳಿಗೆ ಬೆಂಕಿ ಇಟ್ಟರು. ಇಲ್ಲಿನ ತಾಮ್ರ, ಬೆಲೆ ಬಾಳುವ ಮಣಿಗಳು, ಪಾದರಸ, ಕರಿಮೆಣಸು ಏಲಕ್ಕಿ ಮುಂತಾದ ಸಾಂಬಾರ ಪದಾರ್ಥಗಳು ಎಲ್ಲವನ್ನೂ ಮನಸೋ ಇಚ್ಛೆ ದೋಚಿದರು. ಬಂದರಿನಲ್ಲಿದ್ದ ನಮ್ಮವರ ಹಡಗುಗಳನ್ನು ಮುಳುಗಿಸಿದರು. (ಸಮಕಾಲಿನ ಪೋರ್ಚುಗೀಸ್ ಇತಿಹಾಸಕಾರ ಕ್ಯಾಸ್ಟಾನಿಡಾ ಈ ಎಲ್ಲಾ ಘಟನೆಗಳನ್ನು ಸವಿವರವಾಗಿ ದಾಖಲಿಸಿದ್ದಾರೆ.) ಗೋವಾದಿಂದ ಉಳ್ಳಾಲದ ತನಕ ಕರಾವಳಿಯನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿಕೊಂಡು, ಸಮುದ್ರದಲ್ಲಿನ ಯಾವುದೇ ಚಟುವಟಿಕೆಗೆ ಪೋರ್ಚುಗೀಸರಿಂದ ಅನುಮತಿ ಪಡೆಯಬೇಕಾದ ಅನಿವಾರ್ಯತೆ ನಮ್ಮವರದ್ದಾಯಿತು, ಉಳಿದ ಆಳರಸರು ಆಕ್ರಮಕರ ಕಾರ್ಯಗಳಿಗೆ ತಲೆಬಾಗಿ ಭಾರತೀಯರ ಮೇಲೆ ಅವರ ದೌರ್ಜನ್ಯಗಳನ್ನು ಕಂಡೂ ಕಾಣದಂತಿದ್ದು, ಕಾಲಕಾಲಕ್ಕೆ ಕಪ್ಪವನ್ನು ತಪ್ಪದೆ ನೀಡುತ್ತಾ ತೆಪ್ಪಗಿದ್ದ ಸಂದರ್ಭದಲ್ಲಿ, ಬೆಂಕಿಯ ಚೆಂಡಿನಂತೆ ಪೋರ್ಚುಗೀಸರ ಹಡಗುಗಳಿಗೆ ಬೆಂಕಿ ಹಚ್ಚಿ ಅಧರ್ಮಿಗಳ ಎದೆಯಲ್ಲಿ ನಡುಕ ಹುಟ್ಟಿಸಿದ ಭಾರತದ ಮೊದಲ ಸ್ವಾತಂತ್ರ್ಯ ಹೋರಾಟಗಾರ್ತಿ ಉಳ್ಳಾಲದ ವೀರರಾಣಿ ಅಬ್ಬಕ್ಕ.

15ನೇ ಶತಮಾನದವರೆಗೂ ಉತ್ತರದ ಅಂಕೋಲಾ ನದಿಯಿಂದ ದಕ್ಷಿಣದ ಕಾಸರಗೋಡಿನ ಪಯಸ್ವಿನಿ ನದಿಯ ತನಕ, ಸಮುದ್ರ ತಟದಿಂದ ಸಹ್ಯಾದ್ರಿ ಅಂಚಿನವರೆಗಿನ ಪ್ರದೇಶವನ್ನು ತುಳುನಾಡು ಎಂದೇ ಕರೆಯಲಾಗುತ್ತಿತ್ತು. ತನ್ನದೇ ಆದ ವೈಶಿಷ್ಟ್ಯ ಪೂರ್ಣ ರಾಜಕೀಯ, ಸಾಂಸ್ಕೃತಿಕ ಪರಂಪರೆಗಳಿದ್ದ ಪ್ರದೇಶ ಈ ತುಳುನಾಡು. "ಪುರುಷರು ಮಾತ್ರ ರಾಜ್ಯವಾಳಬೇಕಾದವರು, ಅಕಸ್ಮಾತ್ ಗಂಡು ಸಂತಾನವಿಲ್ಲದಿದ್ದರೆ ಆ ರಾಜ್ಯಕ್ಕೆ ಭವಿಷ್ಯವೇ ಇಲ್ಲ" ಅನ್ನುವ ಮಾನಸಿಕತೆಯಲ್ಲಿ ಯುರೋಪಿನಂತಹ ಮುಂದುವರಿದ ದೇಶಗಳಿದ್ದಾಗ, ಅಳಿಯ ಸಂತಾನ ಕಟ್ಟಿನ ಸಂಪ್ರದಾಯದಂತೆ ಸ್ತ್ರೀಯರಿಗೂ ಪಟ್ಟ ಕಟ್ಟಿ ಅವರ ಶೌರ್ಯವನ್ನು ಒರೆಗಲ್ಲಿಗೆ ಹಚ್ಚಿ, ಭಾರತೀಯ ನಾರಿಯರ ಪರಾಕ್ರಮವನ್ನು ಜಗತ್ತಿಗೆ ತಿಳಿಯಪಡಿಸಿದ ವಿಶಿಷ್ಟ ಸಂಪ್ರದಾಯ ತುಳುನಾಡಿನದ್ದು.

ಅಬ್ಬಕ್ಕ ತುಳುನಾಡನ್ನು ಆಳುತ್ತಿದ್ದ ಚೌಟ ವಂಶಕ್ಕೆ ಸೇರಿದವಳು. ಅಹಿಂಸಾ ಪರಮೋ ಧರ್ಮಃ ಎನ್ನುವ ಜೈನ ಮತವನ್ನು ಅನುಸರಿಸುವವಳಾಗಿದ್ದರೂ, ಧರ್ಮ ಹಿಂಸಾ ತಥೈವ ಚ ಎನ್ನುತ್ತಾ ರಾಷ್ಟ್ರ ರಕ್ಷಣೆಗಾಗಿ ಕತ್ತಿಯನ್ನು ಹಿಡಿದು ಭಾರತೀಯ ಸಂಸ್ಕೃತಿಯನ್ನು ಮೆರೆದವಳು. ಚೌಟರ ಅರಸು ಮನೆತನದಲ್ಲಿ ಅಬ್ಬಕ್ಕ ಹೆಸರಿನ ನಾಲ್ವರು ಆಳಿದ ದಾಖಲೆಗಳು ಇರುವುದರಿಂದ ಈಕೆಯನ್ನು ಹಿರಿಯ ಅಬ್ಬಕ್ಕಳೆಂದೇ ಇತಿಹಾಸಕಾರರು ಗುರುತಿಸುತ್ತಾರೆ. ಈಕೆ ಉಳ್ಳಾಲವನ್ನು ಆಳಿದ್ದು 1554ರಿಂದ 1588ರವರೆಗೆ. ಅಬ್ಬಕ್ಕ ಪಟ್ಟಕ್ಕೆ ಬರುವ ಮೊದಲೇ ಯುದ್ಧ ಕೌಶಲ್ಯಗಳು, ಆಡಳಿತ ತರಬೇತಿಯನ್ನು ಹೊಂದಿದ್ದಳು ಜೊತೆಗೆ ಉತ್ತಮ ರೀತಿಯಲ್ಲಿ ಶಾಸ್ತ್ರಾಭ್ಯಾಸವನ್ನು ಕೂಡ ಮಾಡಿದ್ದಳು. ಮಾತ್ರವಲ್ಲದೆ ಸಂಗೀತ ಹಾಗೂ ಸಾಹಿತ್ಯಗಳಲ್ಲಿ ಅಬ್ಬಕ್ಕಳಿಗೆ ಅಪಾರ ಅಭಿರುಚಿ ಇತ್ತು ಎಂಬುದನ್ನು ಪೋರ್ಚುಗೀಸ್ ಇತಿಹಾಸಕಾರರು ತಮ್ಮ ಬರವಣಿಗೆಯಿಂದ ತಿಳಿಯಪಡಿಸುತ್ತಾರೆ. ಅರಬ್ಬರು, ಕಲ್ಲಿಕೋಟೆಯ ಸಾಮುದ್ರಿ ಅರಸ(ಜಾಮೋರಿನ್) ಮುಂತಾದವರ ಜೊತೆ ವ್ಯಾವಹಾರಿಕ ಒಪ್ಪಂದವನ್ನು ಮಾಡಿಕೊಂಡಿದ್ದ ರಾಣಿ ಅಬ್ಬಕ್ಕ ಆ ಕಾಲದಲ್ಲಿಯೇ ಸಾಗರೋತ್ತರ ವ್ಯವಹಾರಗಳನ್ನು ನಡೆಸಿದ್ದಳು. ಆದರೆ ಕರ್ನಾಟಕ ಕರಾವಳಿಯಲ್ಲಿ ನಮ್ಮ ಅಧಿಪತ್ಯವಿರುವುದರಿಂದ ನಮ್ಮ ಅನುಮತಿ ಇಲ್ಲದೆ ಉಳ್ಳಾಲದ ರಾಣಿ ನಡೆಸುತ್ತಿರುವ ವ್ಯವಹಾರ ಪೋರ್ಚುಗೀಸರನ್ನು ಕೆರಳಿಸಿತು. ಅಬ್ಬಕ್ಕಳಿಗೆ ಎಚ್ಚರಿಕೆ ನೀಡಿದರು. ಅವರ ಕಾನೂನೂಗಳಿಗೆ ಕ್ಯಾರೇ ಅನ್ನದ ಅಬ್ಬಕ್ಕ "ಬೆಳೆ ನನ್ನ ದೇಶದ್ದು, ಬೆಳೆದವರು ನನ್ನ ದೇಶದ ರೈತರು, ಸಮುದ್ರ ನನ್ನ ದೇಶದ್ದು. ಇಲ್ಲಿ ವ್ಯವಹಾರ ಮಾಡುವುದಕ್ಕೆ ಎಲ್ಲಿಂದಲೋ ಬಂದ ದರೋಡೆಕೋರರ ಅನುಮತಿ ನಾನು ಪಡೆದುಕೊಳ್ಳಬೇಕೇ? ಸಾಧ್ಯವಿಲ್ಲ" ಎಂದು ದಿಟ್ಟತನದಿಂದ ಉತ್ತರ ನೀಡಿದ್ದಳು. ಪೋರ್ಚುಗೀಸರಿಂದ ಬರಬಹುದಾದ ಅಪಾಯವನ್ನು ತಡೆಗಟ್ಟಲು ಮತ್ತು ಅವರನ್ನು ಸಂಪೂರ್ಣ ಮಟ್ಟ ಹಾಕಲು ಅಬ್ಬಕ್ಕ ಸಂಪೂರ್ಣ ಸಿದ್ಧತೆಯನ್ನು ನಡೆಸಿದಳು. ಮೀನುಗಾರ ಸಮಾಜದ ಉಳ್ಳಾಲದ ಚನ್ನಪ್ಪ ಗುರಿಕಾರ ರಾಣಿ ಅಬ್ಬಕ್ಕಳ ನೌಕಾದಾಳದ ಮುಖ್ಯ ಅಧಿಕಾರಿಯಾಗಿದ್ದ ಕಾರಣ ಅಪಾರ ಸಂಖ್ಯೆಯಲ್ಲಿ ಮೀನುಗಾರ ಸಮಾಜದ ಯುವಕರು ಅಬ್ಬಕ್ಕನ ಸೈನ್ಯವನ್ನು ಸೇರಿಕೊಳ್ಳುವುದು ಸಾಧ್ಯವಾಯಿತು. ಜೊತೆಗೆ ಕರಾವಳಿಯ ಬಿಲ್ಲವರು ಬಂಟರು ಮಾಪಿಳ್ಳೆಗಳು ಅಬ್ಬಕ್ಕನ ಸೈನ್ಯವನ್ನು ಸೇರಿ ಆಕೆಯ ಸೈನ್ಯದ ಶಕ್ತಿಯನ್ನು ಮತ್ತಷ್ಟು ಸಮರ್ಥವಾಗಿಸಿದ್ದರು. ಪೋರ್ಚುಗೀಸರಿಂದ ಸಂಭಾವ್ಯವಾದ ದಾಳಿಯನ್ನು ಊಹಿಸಿದ ಅಬ್ಬಕ್ಕ ಉಳ್ಳಾಲದಲ್ಲಿ ಅಭೇದ್ಯವಾದ ಕೋಟೆಯನ್ನು ನಿರ್ಮಿಸಿ ಅದರ ಮೇಲೆ ಫಿರಂಗಿಗಳನ್ನು ಸನ್ನದ್ಧವಾಗಿರಿಸಿದ್ದಳು. ರಾಣಿ ಅಬ್ಬಕ್ಕ ಅಷ್ಟು ಸುಲಭದಲ್ಲಿ ಬಗ್ಗುವವಳಲ್ಲವೆಂದು ಮೊದಲೇ ಅರಿತಿದ್ದ ಆಗಿನ ಪೋರ್ಚುಗೀಸ್ ವೈಸರಾಯ್ 1555ರಲ್ಲಿ ತನ್ನ ಅತ್ಯಂತ ಸಮರ್ಥ ಅಡ್ಮಿರಲ್ ಡೋಮ್ ಅಲ್ವೇರೋ ಡ ಸಿಲ್ವೇರ ನೇತೃತ್ವದಲ್ಲಿ 21 ಯುದ್ಧ ನೌಕೆಗಳನ್ನು ಮಂಗಳೂರಿಗೆ ಕಳುಹಿಸುತ್ತಾನೆ. ಆರಂಭವಾಯಿತು ಮಂಗಳೂರಿನಲ್ಲಿ ಪೋರ್ಚುಗೀಸರಿಂದ ನರಮೇಧ. ಉಳ್ಳಾಲದ ಸೋಮೇಶ್ವರ ದೇವಸ್ಥಾನದ ಮೇಲೂ ಬರ್ಬರ ದಾಳಿಯಾಯಿತು. ಅಬ್ಬಕ್ಕ ತಡಮಾಡಲಿಲ್ಲ. ಪೋರ್ಚುಗೀಸರೇ ಬೆಚ್ಚಿಬೀಳುವಂತಹ ಪ್ರತ್ಯಘಾತಗಳು ಆರಂಭವಾದವು. ತೆಂಗಿನ ಗರಿಗಳಿಂದ ತಯಾರು ಮಾಡಿದ ಸೂಟೆಗಳು (ದೊಂದಿಗಳು), ತೆಂಗಿನ ಗೆರಟೆಯೊಳಗೆ ಕೋವಿಯ ಮದ್ದನ್ನ ತುಂಬಿಸಿ ತಯಾರಿಸಿದ ಬಾಂಬುಗಳು, ಪುಂಖಾನುಪುಂಖವಾಗಿ ಬರುತ್ತಿದ್ದ ಬೆಂಕಿಯ ಬಾಣಗಳಿಂದ, ಗೆರಟೆ ಬಾಂಬುಗಳಿಂದ ಪೋರ್ಚುಗೀಸರು ತತ್ತರಿಸಿ ಹೋದರು. ಅನೇಕರು ಪ್ರಾಣ ಕಳೆದುಕೊಂಡರು ಪ್ರಾಣ ಉಳಿಸಿಕೊಂಡವರ ಮುಖ ಮೂತಿಗಳು ಸುಟ್ಟುಹೋದವು. ಯುದ್ಧಕ್ಕೆ ಬಂದಿದ್ದ ಆ 21 ಹಡಗುಗಳು ಕೂಡ ಸಂಪೂರ್ಣ ಸುಟ್ಟು ಬೂದಿಯಾದವು. ಸಾಕಷ್ಟು ಸಾವು ನೋವುಗಳು ಆಗುತ್ತಿರುವುದನ್ನು ಕಂಡು ಕಲ್ಲಿಕೋಟೆಯ ದೊರೆ ಸಾಮುದ್ರಿ ಅರಸ ಮಧ್ಯಸ್ಥಿಕೆ ವಹಿಸಿ ಸಂಧಾನ ಮಾಡಿ ಯುದ್ಧವನ್ನು ನಿಲ್ಲಿಸಿದ.

ಅಬ್ಬಕ್ಕ ಮತ್ತವಳ ಸೈನ್ಯದ ವೀರಾವೇಶವನ್ನು ಜೀರ್ಣಿಸಿಕೊಳ್ಳಲು ಪೋರ್ಚುಗೀಸರಿಗೆ ಬರೋಬ್ಬರಿ ಎರಡು ವರ್ಷಗಳೇ ಬೇಕಾಯಿತು. ಆದರೆ ಹೊನ್ನು ಮಣ್ಣು ಮತ್ತು ಅಧಿಕಾರದ ಆಸೆಯಿಂದ ಮತ್ತೆ 1557ರಲ್ಲಿ ಮತ್ತೊಮ್ಮೆ ಕಾಲು ಕೆರೆದು ಯುದ್ಧಕ್ಕೆ ಬಂದರು. ಆಗ ಪೋರ್ಚುಗೀಸರ ಮುಂದಾಳುವಾಗಿದ್ದವನು ಲೂಯಿಸ್ ಡಿ ಮೆಲ್ಲೋ. ಪರಕೀಯರ ನೌಕೆಗಳು ಉಳ್ಳಾಲಕ್ಕೆ ಬಂದು ಮುಟ್ಟುವ ಮೊದಲೇ ಅಬ್ಬಕ್ಕನ ಸೈನ್ಯ ಮತ್ತು ಕರಾವಳಿಯ ಮೀನುಗಾರರು ಪ್ರಬಲ ಪ್ರತ್ಯಾಘಾತಗಳನ್ನು ಒಡ್ಡಿದರು. ಮುಂದೆ ನಡೆದ ಭೀಕರ ಯುದ್ಧದ ಪರಿಣಾಮ ಸಮುದ್ರದ ಮೂಲಕ ನೌಕೆಯಲ್ಲಿ ಬಂದ ಆಕ್ರಮಣಕಾರಿಗಳು "ಬದುಕಿದರೆ ಬಾಳು" ಎಂಬಂತೆ ರಸ್ತೆಗಳ ಮೂಲಕ ಗೋವಾಕ್ಕೆ ಪಲಾಯನ ಮಾಡಿದರು. ಮುಂದೆ ಹತ್ತು ವರ್ಷಗಳ ಕಾಲ ಉಳ್ಳಾಲದ ಕಡೆ ತಲೆಹಾಕಿಯೂ ಮಲಗಲಿಲ್ಲ ಪೋರ್ಚುಗೀಸರು.

ಮತ್ತೆ ಪ್ರಾರಂಭವಾಯಿತು ಅಬ್ಬಕ್ಕನ ಅಜೇಯ ರಾಜ್ಯಭಾರ. ಒಂದೆಡೆ ಪೋರ್ಚುಗೀಸರಿಗೆ ಸಲ್ಲುತ್ತಿದ್ದ ಕಪ್ಪಕ್ಕೂ ಕಲ್ಲು ಬಿತ್ತು, ಮತ್ತೊಂದೆಡೆ ಅವರ ವೈರಿ ಕಲ್ಲಿಕೋಟೆಯ ದೊರೆ ಸಾಮುದ್ರಿ ಅರಸನ ಜೊತೆಗೆ ರಾಜಕೀಯ ಸಖ್ಯವನ್ನು ಬೆಳೆಸಿಕೊಂಡು ಅವನ ಹಡಗುಗಳ ಜೊತೆ ಪರ್ಷಿಯಾ, ಅರಬ್ ಮುಂತಾದ ದೇಶಗಳ ಜೊತೆ ವ್ಯಾಪಾರ ವ್ಯವಹಾರವನ್ನು ಪುನರಾರಂಭಿಸಿದಳು. ಭಾರತದ ಪಶ್ಚಿಮ ಸಮುದ್ರದಲ್ಲಿ ವ್ಯವಹಾರಕ್ಕೆ ಪೋರ್ಚುಗೀಸರು ವಿಧಿಸಿದ್ದ ಕರ್ತಾಜ್ (Cartaz –ಸಮುದ್ರ ವ್ಯವಹಾರಗಳ ತೆರಿಗೆ)ಗೆ ಕವಡೆ ಕಿಮ್ಮತ್ತಿನ ಬೆಲೆಯೂ ಇಲ್ಲದಾಯಿತು. ಮತ್ತೆ ಬಂದರು ದಂಡೆತ್ತಿ ಪೋರ್ಚುಗೀಸರು. ಆ ಮೂರನೇ ಕದನದಲ್ಲಿ ಪೋರ್ಚುಗೀಸರ ಸೇನಾಧಿಕಾರಿಯಾಗಿದ್ದವ ಜಾವೋ ಪಿಕ್ಸಿವೋಟೋ. ರಾಣಿ ಅಬ್ಬಕ್ಕ ಎದೆ ಕವಚವನ್ನು ಧರಿಸಿ ಬಿಳಿ ಕುದುರೆಯ ಮೇಲೆ ಕುಳಿತು, ಸೈನಿಕರಲ್ಲಿ ಯುದ್ಧೋತ್ಸಾಹವನ್ನು ತುಂಬುತ್ತಿದ್ದ ರೀತಿಯನ್ನು ಪೋರ್ಚುಗೀಸ್ ಇತಿಹಾಸಕಾರರಾದ ಕೂಟೊ ಮತ್ತು ಫ್ರಾನ್ಸಿಕೋ ಬಹಳವಾಗಿ ಮೆಚ್ಚಿ ದಾಖಲಿಸುತ್ತಾರೆ. ಪೋರ್ಚುಗೀಸ್ ಸೈನಿಕರು ಉಳ್ಳಾಲವನ್ನು ಆಕ್ರಮಿಸಿದರು. ಕಂಡ ಕಂಡವರನ್ನು ಸುಟ್ಟರು, ಊರಿಗೆ ಬೆಂಕಿ ಇಟ್ಟರು, ಕ್ರೂರವಾಗಿ ಜನರನ್ನು ಹಿಂಸಿಸ ತೊಡಗಿದರು. ಈ ನಡುವೆ 'ಉಳ್ಳಾಲದ ಕ್ರೈಸ್ತ ಜೆಸ್ಯೂಟ್ ಪಾದ್ರಿಗಳು ಶಿಲುಬೆ ಹಿಡಿದುಕೊಂಡು ಪೋರ್ಚುಗೀಸ್ ಸೈನಿಕರಿಗೆ ಯುದ್ಧ ನಡೆಸುವಂತೆ ಪ್ರೋತ್ಸಾಹಿಸುತ್ತಿದ್ದರು' ಎಂಬ ಕರಾಳ ಸತ್ಯವನ್ನು ಖ್ಯಾತ ಇತಿಹಾಸಜ್ಞರಾದ ಡಾ.ಕೆ.ಜಿ. ವಸಂತ ಮಾಧವ ಅವರು ಅಬ್ಬಕ್ಕನ ಕುರಿತಾದ ತಮ್ಮ ಸಂಶೋಧನಾ ಗ್ರಂಥದಲ್ಲಿ ಅನಾವರಣಗೊಳಿಸುತ್ತಾರೆ. ಅಬ್ಬಕ್ಕ ಮತ್ತವಳ ಸೈನಿಕರು ಪೋರ್ಚುಗೀಸರಿಗೆ ಬಹಳ ಪ್ರಬಲವಾದ ಪ್ರತಿರೋಧವನ್ನು ತೋರಿದರು. ಅಪಾರವಾದ ಸಾವು ನೋವುಗಳು ಉಳ್ಳಾಲದಲ್ಲಿ ಸಂಭವಿಸುತ್ತಿರುವುದನ್ನು ಕಂಡು ಅಬ್ಬಕ್ಕ ಯುದ್ಧ ತಂತ್ರದ ಭಾಗವಾಗಿ ತನ್ನ ಸೈನಿಕರ ಜೊತೆ ಅಲ್ಲಿಂದ ತಪ್ಪಿಸಿಕೊಂಡು ಪಕ್ಕದ ಬೆಟ್ಟಗಳಲ್ಲಿ ತಲೆಮರಿಸಿಕೊಂಡಳು. ಇತ್ತ ಅಬ್ಬಕ್ಕ ಓಡಿ ಹೋದಳೆಂದು ಪೋರ್ಚುಗೀಸ್ ಸೈನಿಕರು ವಿಜಯೋನ್ಮಾದದಿಂದ ಕಂಠಪೂರ್ತಿ ಕುಡಿದು ತೂರಾಡುತ್ತಿದ್ದಾಗ ರಾತ್ರಿಯ ಹೊತ್ತು ಇದ್ದಕ್ಕಿದ್ದಂತೆ ಅಬ್ಬಕ್ಕ ತನ್ನ ಸೈನಿಕರೊಂದಿಗೆ ಸಿಂಹಿಣಿಯಂತೆ ದಾಳಿ ನಡೆಸುತ್ತಾಳೆ. ಸೇನಾಧಿಕಾರಿ ಜಾವೋ ಪಿಕ್ಸಿವೋಟೋ ಅಬ್ಬಕ್ಕನ ಅಬ್ಬರಕ್ಕೆ ಸಿಲುಕಿ ಇಹಲೋಕವನ್ನೇ ತ್ಯಜಿಸುತ್ತಾನೆ. ತಮ್ಮ ಸೇನಾಧಿಕಾರಿಯನ್ನು ಬರ್ಬರವಾಗಿ ಯಮಪುರಿಗಟ್ಟಿದ ಸುದ್ದಿ ತಿಳಿಯುತ್ತಿದ್ದಂತೆ ಪೋರ್ಚುಗೀಸ್ ಸೈನಿಕರು ಅರ್ಧ ದಾರಿಯಲ್ಲಿ ತಮ್ಮ ನೌಕೆಗಳನ್ನು ಗೋವೆಯತ್ತ ತಿರುಗಿಸಿ ಓಡಿದರು, ಅಸಂಖ್ಯ ಪೋರ್ಚುಗೀಸ ಸೈನಿಕರು ಸತ್ತು ಬಿದ್ದರು, ಬದುಕಿ ಉಳಿದವರು ಕಂಗಾಲಾಗಿ ವೈರಿಗಳು ಯಾರು ಎಂದು ತಿಳಿಯಲಾಗದೆ ತಮ್ಮವರಿಗೇ ಗುಂಡು ಹಾರಿಸಿಕೊಂಡರು.




**ವೀರರಾಣಿ ಅಬ್ಬಕ್ಕ ಅವರ 500ನೇ ಜಯಂತಿ ವರ್ಷ (1525-2025)**

1570ರ ಹೊತ್ತಿಗೆ ಪೋರ್ಚುಗೀಸರನ್ನ ಭಾರತದಿಂದ ಓಡಿಸಲು ಗೇರುಸೊಪ್ಪೆಯ ರಾಣಿ ಚೆನ್ನಭೈರಾದೇವಿ, ಕಲ್ಲಿಕೋಟೆಯ ಸಾಮುದ್ರಿ ಅರಸ ಮತ್ತಿತರರು ಸೇರಿ ಯೋಜನೆ ಸಿದ್ಧಪಡಿಸುವಾಗ ಛಲದ ಜ್ವಾಲೆಯಂತಿದ್ದ ರಾಣಿ ಅಬ್ಬಕ್ಕಳೂ ಅವರೊಂದಿಗೆ ಸೇರಿಕೊಳ್ಳುತ್ತಾಳೆ. ಪೋರ್ಚುಗೀಸರಿಗೆ ಮತ್ತಷ್ಟು ಸಂಕಟವಾಯಿತು. ಈ ನಡುವೆ ಮಲಬಾರ್ ನೌಕಾಧಿಕಾರಿ ಕುಟ್ಟಿ ಪೋಕರೆಯನ್ನು ಆಹ್ವಾನ ಮಾಡಿ "ಮಂಗಳೂರಿನಲ್ಲಿದ್ದ ಪೋರ್ಚುಗೀಸರ ಕೋಟೆಯನ್ನು ವಶಪಡಿಸಿಕೋ, ಅದಕ್ಕೆ ಬೇಕಾದ ಎಲ್ಲ ಖರ್ಚುಗಳನ್ನು ನಾನು ನೋಡಿಕೊಳ್ಳುತ್ತೇನೆ" ಎಂದು ಆತನನ್ನು ಹುರಿದುಂಬಿಸುತ್ತಾಳೆ. ಇದರಿಂದ ಅಪಮಾನಿತರಾದ ಪೋರ್ಚುಗೀಸರು ಮತ್ತೆ ಬಂದರು ಕದನಕ್ಕೆ. ಎಂದಿನಂತೆ ರಾಣಿ ಅಬ್ಬಕ್ಕಳ ವೀರಾವೇಶಕ್ಕೆ, ಅವಳ ಸೈನಿಕರ ಪರಾಕ್ರಮಕ್ಕೆ ಸೀಮೆಯೇ ಇರಲಿಲ್ಲ, ಆದರೆ ತನ್ನ ಗಂಡ ಲಕ್ಷ್ಮಪ್ಪ ಬಂಗರಸ ಪೋರ್ಚುಗೀಸರ ಜೊತೆ ಸೇರಿಕೊಂಡು ನಡೆಸಿದ ದ್ರೋಹದಿಂದಾಗಿ ಅಬ್ಬಕ್ಕ ಸೆರೆಸಿಕ್ಕುವಂತಾಯ್ತು. ಕಲ್ಲಿಕೋಟೆ ಅರಸನ ಸಂಧಾನದಿಂದ ಬಿಡುಗಡೆಯಾಗಿ ಬಂದ ಆ ಕಡಲ ತಡಿಯ ಸಿಂಹಿಣಿ, ಮುಂದೆ 1588ರವರೆಗೆ ಉಳ್ಳಾಲದ ರಾಣಿಯಾಗಿ ಅಜೇಯಳಾಗಿ ರಾಜ್ಯಭಾರ ನಡೆಸುತ್ತಾಳೆ. ಮೀಸೆ ತಿರುವುತ್ತಲೇ ಸಿಂಹಾಸನದ ಮೇಲೆ ಕುಳಿತ ಅನೇಕ ರಾಜ ಮಹಾರಾಜರೇ ಆ ಐರೋಪ್ಯರ ಕಾನೂನುಗಳಿಗೆ ಬಗ್ಗಿ ಸಲಾಮು ಹಾಕುತ್ತಿದ್ದ ಕಾಲಘಟ್ಟದಲ್ಲಿ, ಸುಮಾರು ಮೂರು ದಶಕಗಳಿಗೂ ಹೆಚ್ಚು ಕಾಲ ಆ ಪೋರ್ಚುಗೀಸರಿಗೆ ಸಿಂಹಸ್ವಪ್ನವಾಗಿ ಕಾಡಿದ್ದ ಆ ವೀರ ಮಾತೆ ಅಬ್ಬಕ್ಕಳನ್ನು ತಾಯಿ ಭಾರತಿ ಪುತ್ರಿಯಾಗಿ ಪಡೆದು ಇಂದಿಗೆ ಐನೂರು ಸಂವತ್ಸರಗಳು.

## ಸಂಸ್ಮರಣೆ


# ಹೇಮರೆಡ್ಡಿ ಮಲ್ಲಮ್ಮ

"ಸಂಪತ್ತಿಗೆ ಸೊಕ್ಕಬೇಡಿ, ಸಿರಿ ಬಂದ ಕಾಲಕ್ಕೆ ಮೈಮರೆತು ಹಿಗ್ಗದೇ, ದಾನಧರ್ಮ ಮಾಡುವುದರ ಮೂಲಕ ತನ್ನ ಬಳಗದವರು ದಾನಗುಣವನ್ನು ಬೆಳೆಸಿಕೊಳ್ಳಬೇಕು" ಎಂದು ವಚನಗಳ ಮೂಲಕ ಮಾತ್ರವಲ್ಲದೆ, ಸ್ವತಃ ಮಾಡಿ ತೋರಿಸಿದ ವಚನಗಾರ್ತಿ, ಪ್ರೇರಣಾದಾಯಿ ವ್ಯಕ್ತಿತ್ವ ಹೇಮರೆಡ್ಡಿ ಮಲ್ಲಮ್ಮ.

12ನೇ ಶತಮಾನದಲ್ಲಿ ನಡೆದ ವಚನ ಕ್ರಾಂತಿಯ ನಂತರ ಭಕ್ತಿ ಪರಂಪರೆ ಮುಂದುವರೆಸಿಕೊಂಡು ಹೋದ ಕೀರ್ತಿ ಅವರಿಗೆ ಸಲ್ಲುತ್ತದೆ. ವಚನಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ ಮಲ್ಲಮ್ಮ ಶ್ರೀಶೈಲದ ದಕ್ಷಿಣಕ್ಕಿರುವ ವೆಲ್ಲಟೂರು ಜಿಲ್ಲೆಗೆ ಸೇರಿದ ರಾಮಪುರದವರು. ರಾಮರೆಡ್ಡಿ–ಗೌರಮ್ಮ ದಂಪತಿಗಳಿಗೆ ಜನಿಸಿದರು. ಶ್ರೀಶೈಲ ಚನ್ನಮಲ್ಲಿಕಾರ್ಜುನನ ಕೃಪೆಯಿಂದ ಜನಿಸಿದ ಇವರು ಚಿಕ್ಕಂದಿನಿಂದಲೂ ಶ್ರೀಶೈಲ ಚನ್ನಮಲ್ಲಿಕಾರ್ಜುನನನ್ನೇ ಆರಾಧನೆ ಮಾಡುತ್ತಿದ್ದರು.

ಹೇಮರೆಡ್ಡಿ ಮಲ್ಲಮ್ಮ ಅವರನ್ನು ಸಿದ್ದಾಪುರದ ಕುಮಾರಗಿರಿ ವೇಮರೆಡ್ಡಿಯ ಮಗ ಭರಮರೆಡ್ಡಿ ಎಂಬವರಿಗೆ ಮದುವೆ ಮಾಡಿಕೊಡುತ್ತಾರೆ. ಭರಮರೆಡ್ಡಿಯನ್ನು ಎಲ್ಲರೂ ಹುಚ್ಚ, ಬುದ್ಧಿಮಾಂದ್ಯ ಎಂದು ಹೇಳುತ್ತಿದ್ದರೂ, ಮಲ್ಲಮ್ಮ ಗಂಡನಲ್ಲಿದ್ದ ಮುಗ್ಧತೆಯನ್ನು ಆರಾಧಿಸುತ್ತಾರೆ. ತಮ್ಮ ಪತಿಯನ್ನು ಮಹಾದೇವನೆಂದು ಪರಿಗಣಿಸುತ್ತಿದ್ದರು. ತಮ್ಮ ಜೀವನದಲ್ಲಿ ಅದೆಷ್ಟೇ ಕಷ್ಟವಿದ್ದರೂ, ಇನ್ನೊಬ್ಬರಿಗೆ ಸಹಾಯ ಮಾಡುವುದಕ್ಕೆ ಮಲ್ಲಮ್ಮ ಹಿಂದೆ ಮುಂದೆ ನೋಡುತ್ತಿರಲಿಲ್ಲ.

"ಶಿವ ಕರೆದ ಕಾಲಕ್ಕೆ ಮ್ಯಾಲಕ ಹೋಗಾಗ, ನಾಕು ಮಂದಿ ಕಳುಸಾಕ ಬರುವಂಗ ಇರಬೇಕು" ಎನ್ನುತ್ತಿದ್ದ ಹೇಮಾ ರೆಡ್ಡಿ ಮಲ್ಲಮ್ಮಳನ್ನು ಅವರ ಅತ್ತೆ ಆಕೆಗೆ ಉಣ್ಣುವುದಕ್ಕೆ, ಉಡುವುದಕ್ಕೆ ಸರಿಯಾಗಿ ಕೊಡದೆ, ಅವಳನ್ನು ಅಡವಿಗೆ ನೂಕಿ ಸಂಕಷ್ಟಗಳ ಸಂಕೋಲೆಗೆ ಸಿಗಿಸುವಳು. ಆದರೂ ಹೇಮರೆಡ್ಡಿ ಮಲ್ಲಮ್ಮ ನೊಂದುಕೊಳ್ಳದೆ





ಮಲ್ಲಿಕಾರ್ಜುನನ ಪೂಜೆ ಮತ್ತು ಆರಾಧನೆ ಮಾಡುವುದರಲ್ಲಿ ಮಗ್ನಳಾಗಿರುತ್ತಿದ್ದರು. ಅದೊಂದು ಸಲ ಮಲ್ಲಮ್ಮನಿಗೆ ಬುದ್ಧಿ ಕಲಿಸಲು ಅವಳ ಅತ್ತೆ ಮನೆಯ ಮುಂದೆ ಭಿಕ್ಷುಕ ಬಂದಾಗ ಸಿಟ್ಟುಗೊಂಡು ಒಲೆಯಲ್ಲಿನ ಕೆಂಡವನ್ನು ಅವಳ ಕೈಗೆ ನೀಡಿ ಬಾಗಿಲಲ್ಲಿ ನಿಂತಿದ್ದ ಭಿಕ್ಷುಕನಿಗೆ ನೀಡಲು ಹೇಳಿದಾಗ, ಮಲ್ಲಮ್ಮ ಅತ್ತೆ ಕೊಟ್ಟ ಕೆಂಡವನ್ನು ಸ್ವೀಕರಿಸಿ ಮನದಲ್ಲಿ ಮಲ್ಲಿಕಾರ್ಜುನನನ್ನು ನೆನೆದು ಭಿಕ್ಷಾರ್ಥಿಯ ಜೋಳಿಗೆಗೆ ಅದನ್ನೇ ನೀಡುತ್ತಾರೆ. ಆಗ ಅದು ಧಾನ್ಯವಾಗಿ ಮಾರ್ಪಡುತ್ತದೆ. ಅಂದಿನಿಂದ ಮಲ್ಲಮ್ಮನ ಹೆಸರು ಬೆಂಕಿದಾನದ ಮಲ್ಲಮ್ಮ ಎಂದಾಯಿತು ಎಂಬ ಕಥೆ ಇದೆ.

ಶಿವಶರಣರಲ್ಲಿ ಅಚಲವಾದ ದೈವಭಕ್ತಿ, ಕಾಯಕ ನಿಷ್ಠೆ, ದಾನ ಧರ್ಮದಿಂದ, ಆದರ್ಶ ಗೃಹಿಣಿಯಾಗುವ ಮೂಲಕ ಪ್ರಸಿದ್ಧಿ ಪಡೆದಿದ್ದ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮನ ಜೀವನಗಾಥೆಯನ್ನು ಚಲನಚಿತ್ರವಾಗಿ ಮಾಡಲಾಗಿದೆ. ಎಸ್.ಸೌಂದರ್ಯರಾಜನ್ ಮತ್ತು ಜತಿನ್ ಬ್ಯಾನರ್ಜಿ ಅವರ ನಿರ್ದೇಶನದಲ್ಲಿ ಮೂಡಿ ಬಂದ ಈ ಚಿತ್ರದಲ್ಲಿ ಹುಚ್ಚನಾದ ಗಂಡನ ಸೇವೆಯನ್ನು ಮಾಡುತ್ತಾ ಅತ್ತೆ ನೀಡಿದ ಕಷ್ಟ–ಕಾರ್ಪಣ್ಯಗಳನ್ನು ಸಹಿಸುತ್ತಾ, ಶಿವನ ಆರಾಧನೆ ಮಾಡುತ್ತಾ ಜೀವನ ಸಾಗಿಸುತ್ತಿದ್ದ ಮಲ್ಲಮ್ಮನ ಬದುಕು ಶಿವನ ಕರುಣೆಯಿಂದ ಬದಲಾಗುತ್ತದೆ. ಗಂಡನಿಗೆ ಬುದ್ಧಿಮಾಂದ್ಯತೆ 'ಗುಣವಾಗುವುದಲ್ಲದೆ, ಅತ್ತೆಗೆ ಜ್ಞಾನೋದಯ ಆಗುತ್ತದೆ ಎಂಬ ರೀತಿಯಲ್ಲಿ ಚಿತ್ರವು ಪೂರ್ಣಗೊಳ್ಳುತ್ತದೆ.

## ಅಖಂಡ ರಾಷ್ಟ್ರ ತಪಸ್ವಿನಿ ಅಹಲ್ಯಾಬಾಯಿ ಹೋಳ್ಕರ್

ಪುಸ್ತಕ ಪರಿಚಯ

**ಲೇಖಕರು:** ಮೇಘಾ ಪ್ರಮೋದ್
**ಪ್ರಕಾಶನ:** ಸಮೃದ್ಧ ಸಾಹಿತ್ಯ
**ಬೆಲೆ:** ರೂ.120




ಅಹಲ್ಯಾ ಬಾಯಿ ಹೋಳ್ಕರ್ ಎಂಬ ಮೇರು ವ್ಯಕ್ತಿತ್ವವು ಪುಣ್ಯಭೂಮಿ ಭಾರತದಲ್ಲಿ ಜನ್ಮತಾಳಿ 300 ವಸಂತಗಳು ತುಂಬಿದೆ. ಜೀವನದುದ್ದಕ್ಕೂ ಎದುರಾದ ಕಷ್ಟಗಳ ಸರಮಾಲೆಯ ನಡುವಿನಲ್ಲೂ ತನ್ನ ಪ್ರಜೆಗಳ ಹಿತಕ್ಕಾಗಿ, ಭಾರತದ ಏಕಾತ್ಮತೆಗಾಗಿ ಕಾರ್ಯನಿರ್ವಹಿಸಿ, ತನ್ನ ಸಮಸ್ತ ಸಂಪತ್ತು, ಅಧಿಕಾರ ಎಲ್ಲವೂ ಶಿವನಿಗೆ ಸೇರಿದ್ದಾಗಿದ್ದು ತಾನು ಕೇವಲ ಅವನ ಆಜ್ಞಾಪಾಲನೆ ಮಾಡುತ್ತಿದೀನಿ ಎಂಬ ಭಾವದಿಂದ ರಾಜ್ಯಭಾರ ಮಾಡುತ್ತಿದ್ದ, ದೇಶ ಹಿಂದೆಂದೂ ಕಂಡಿಲ್ಲದ ಅಪರೂಪದ ವ್ಯಕ್ತಿತ್ವ. ಪರಕೀಯರ ದಾಳಿ, ಆಕ್ರಮಣಗಳ ನಡುವೆಯೂ ತನ್ನ ರಾಜ್ಯವನ್ನು ಸಮೃದ್ಧಗೊಳಿಸುತ್ತಾ ಇಡೀ ಭಾರತದ ಸಾಂಸ್ಕೃತಿಕ ವೈಭವವನ್ನು, ರಾಷ್ಟ್ರೀಯ ಚೇತನವನ್ನು, ಭಾರತದ ಏಕಾತ್ಮತೆಯನ್ನು ಮರು ಸ್ಥಾಪಿಸಲು ಶ್ರಮಿಸಿದವರು– 'ಅಖಂಡ ರಾಷ್ಟ್ರ ತಪಸ್ವಿನಿ ಅಹಲ್ಯಾಬಾಯಿ ಹೋಳ್ಕರ್'. ಲೋಕಮಾತೆ ಅಹಲ್ಯಾಬಾಯಿ ಹೋಳ್ಕರರ ಅಂದಿನ ರಾಜಕೀಯ, ಸಾಮಾಜಿಕ ನಿಲುವುಗಳು ಇಂದಿಗೂ ಸ್ಫೂರ್ತಿದಾಯಕವಾದದ್ದು ಎನ್ನುವುದರಲ್ಲಿ ಸಂಶಯವಿಲ್ಲ. ಪುಸ್ತಕಕ್ಕಾಗಿ ಸಂಪರ್ಕಿಸಿ: 9880773027

## ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ಸಮಾಜಕ್ಕೆ ಆದ್ಯತೆ

ನಾಗರಿಕ ಶಿಷ್ಟಾಚಾರ

ಪ್ರಸ್ತುತ ಸಾಮಾಜಿಕ ಜಾಲತಾಣಗಳ ಕಾಲ. ಫೇಸ್ಬುಕ್, ಟ್ವಿಟರ್, ಇನ್‌ಸ್ಟಾಗ್ರಾಮ್, ಸ್ನ್ಯಾಪ್‌ಚ್ಯಾಟ್ ಸೇರಿದಂತೆ ನಾನಾ ಬಗೆಯ ಸಾಮಾಜಿಕ ಜಾಲತಾಣಗಳು ಕಾರ್ಯನಿರ್ವಹಿಸುತ್ತಿದ್ದು, ಮಿಲಿಯನ್‌ಗಟ್ಟಲೇ ಬಳಕೆದಾರರನ್ನು ಇವುಗಳು ಹೊಂದಿವೆ. ಈ ಸಾಮಾಜಿಕ ಜಾಲತಾಣಗಳು ಸುಂದರ ಬದುಕಿಗೆ ಎಷ್ಟರ ಮಟ್ಟಿಗೆ ಪೂರಕವೋ, ಅಷ್ಟೇ ಮಾರಕವೂ ಹೌದು. ಸಮಾಜಿಕ ಜಾಲತಾಣ ವರ ಅಥವಾ



ಶಾಪ ಆಗುವುದು ಅದನ್ನು ಬಳಸುವ ನಮ್ಮ ಕೈಯಲ್ಲೇ ಇದೆ. ಸಾಮಾಜಿಕ ಜಾಲತಾಣಗಳು ನಮ್ಮ ಬದುಕನ್ನು ಸಮಾಜದ ಮುಂದೆ ಪ್ರಸ್ತುತಪಡಿಸುವ ಒಂದು ಪ್ರಬಲ ಮತ್ತು ಪ್ರಭಾವಿ ಮಾಧ್ಯಮವಾಗಿ ರೂಪುಗೊಂಡಿವೆ. ಹೀಗಿರುವಾಗ ಅಂತಹ ವೇದಿಕೆಗಳಲ್ಲಿ ನಮ್ಮ ಸ್ವಭಾವ ಹೇಗಿರಬೇಕು ಎನ್ನುವುದನ್ನು ನಾವು ಗಮನವಹಿಸಬೇಕು. ಸಾಮಾಜಿಕ ಜಾಲತಾಣಗಳಲ್ಲಿ ನಾವು ಪ್ರಸ್ತುತಪಡಿಸುವ ವಿಷಯಗಳು, ನಾವು ಮಾಡುವ ಕಮೆಂಟ್‌ಗಳು, ಬಳಸುವ ಭಾಷೆ ಎಲ್ಲವೂ ಸಭ್ಯವಾಗಿರುವಂತೆ ಗಮನವಹಿಸಬೇಕು. ಸಾಮಾಜಿಕ ಜಾಲತಾಣದ ಬಳಕೆಯ ವೇಳೆ ಸಮಾಜ ಹಿತಕ್ಕೆ ಆದ್ಯತೆಯನ್ನು ನೀಡಬೇಕು. ಅಸಭ್ಯ ಪದಗಳ ಬಳಕೆ ಮಾಡಬಾರದು. ಅಶ್ಲೀಲ ವಿಷಯಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಬಾರದು. ರಾಷ್ಟ್ರದ ಸಾರ್ವಭೌಮತೆಗೆ ವಿರುದ್ಧವಾದ, ಸಮಾಜದ ಸ್ವಾಸ್ಥ್ಯವನ್ನು ಕದಡುವ ವಿಷಯಗಳನ್ನು ಪ್ರಕಟಿಸಬಾರದು.

# ಅಲಕ್ಷ್ಯಕ್ಕೊಳಗಾದ ಬಂಧುಗಳ ಬದುಕಿಗೆ ಆಸರೆಯಾದ ಸಂಘದ ಸ್ವಯಂಸೇವಕರು

ಸೇವಾಗಾಥಾ

ವಿಕಲಚೇತನರಾದ ವಿಕ್ರಂ ತಮ್ಮ ಮುಂದಿದ್ದ ಕಸದ ರಾಶಿಯಲ್ಲಿ ದೃಷ್ಟಿ ನೆಟ್ಟು ಅದರಲ್ಲಿದ್ದ ಪ್ಲಾಸ್ಟಿಕ್ ಚೀಲ ಹಾಗೂ ಬಾಟಲಿಗಳನ್ನು ಹೆಕ್ಕಿ ತಮ್ಮ ಜೋಳಿಗೆಗೆ ತುಂಬುತ್ತಿದ್ದರು. ಅನತಿದೂರದಲ್ಲಿ ಅವರ ಪತ್ನಿ ಕೂಡ ಅದೇ ಕೆಲಸದಲ್ಲಿ ತೊಡಗಿದ್ದರು. ಮೂವರು ಮಕ್ಕಳೂ ತಾಯಿಗೆ ತಮ್ಮ ಕೈಲಾದ ಸಹಾಯ ಮಾಡುತ್ತಿದ್ದರು. ಕಸದ ತೊಟ್ಟಿಗಳಿಂದಲೇ ಹೊಟ್ಟೆ ಹೊರೆಯುತ್ತಿರುವ ನೂರಾರು ಕುಟುಂಬಗಳನ್ನು ನಾವೆಲ್ಲರೂ ನೋಡಿದ್ದೇವೆ.

ಹರಿದು ಕೊಳಕಾದ ಬಟ್ಟೆ ತೊಟ್ಟ ಚಿಂದಿ ಆಯುವ ಹತ್ತು ವರ್ಷ ವಯಸ್ಸಿನ ಹುಡುಗಿ ಗೀತಾ (ಹೆಸರು ಬದಲಿಸಿದೆ) ರಸ್ತೆ ಬದಿಯಲ್ಲಿ ಸಮೋಸಾ ಮೆಲ್ಲುತ್ತಿದ್ದವರನ್ನೇ ನೋಡುತ್ತಿದ್ದಾಳೆ. ಏನನ್ನೋ ಹುಡುಕುತ್ತಿರುವಂತೆ ನಟಿಸುತ್ತಾ ಬಳಿಸಾರಿದ ಹುಡುಗಿ ಸಮೋಸಾ ತಿನ್ನುವವರಿಗೆ ತಿಳಿಯದಂತೆ ಧೂಳು ಎಬ್ಬಿಸುತ್ತಾಳೆ. ಸಿಡಿಮಿಡಿಗೊಂಡ ಗ್ರಾಹಕ ಇವಳ ಕೆನ್ನೆಗೆ ಬಾರಿಸಿ ಉಳಿದ ಸಮೋಸಾಗಳನ್ನು ತಿಪ್ಪೆಗೆಸೆಯುತ್ತಾನೆ. ಗೀತಾ ತಿಪ್ಪೆಯಿಂದ ತೆಗೆದು ಸಮೋಸಾ ತಿನ್ನುತ್ತಾಳೆ. ಅವಳು ರುಚಿ ನೋಡಿದ ಮೊದಲ ಸಮೋಸಾ ಅದು! ಅಂದಿನಿಂದ ಅವಳು ಪ್ರತಿನಿತ್ಯ ಸಮೋಸಾ ತಿಂದಳು. ಸಮೋಸಾಗಳಿಸುವ ಉಪಾಯ ಅವಳಿಗೆ ತಿಳಿದುಹೋಗಿತ್ತು. ಇವೆರಡೂ ಮನಮಿಡಿವ ಘಟನೆಗಳು, ಕಟ್ಟುಕತೆಗಳಲ್ಲ.

ಮಧ್ಯಪ್ರದೇಶದ ಆಗರ್ ಮಾಲ್ವಾದಲ್ಲಿ ಎಲ್ಲರಿಂದಲೂ ತಾತ್ಸಾರಕ್ಕೆ ಗುರಿಯಾಗಿದ್ದ ಪಾರ್ಧೀ ಸಮಾಜದ ನೋವಿನ ವಾಸ್ತವಿಕತೆ ಆಗಿತ್ತು. ಆಗ ರಾಷ್ಟ್ರೀಯ ಸ್ವಯಂಸೇವಕ ಸಂಘವು ಈ ಅಲೆಮಾರಿ ಸಮುದಾಯದ ಜನರನ್ನು ಸಂಘಟಿಸುವ ಮೂಲಕ ಬದಲಾವಣೆಯ ಹೊಸ ಪರ್ವಕ್ಕೆ ನಾಂದಿ ಹಾಡಿತು. ಇಂದು, ಪ್ರಧಾನಮಂತ್ರಿ ಗೃಹ ಯೋಜನೆಯ ಅಡಿಯಲ್ಲಿ ನಿರ್ಮಿತವಾಗಿರುವ ತಮ್ಮದೇ ಸ್ವಂತ ಮನೆಯಿಂದ ದುಡಿಯಲೆಂದು ಹೊರಡುವ ವಿಕ್ರಮ್, ಶಾಲಾ ಸಮವಸ್ತ್ರದಲ್ಲಿ ಕಂಗೊಳಿಸುತ್ತಿರುವ ತಮ್ಮ ಮಕ್ಕಳನ್ನು ಕಣ್ತುಂಬಿಕೊಂಡು ಕೈಬೀಸುತ್ತಾರೆ. ದಾಖಲಾತಿಗಳ ಕೊರತೆಯಿಂದ ಸರ್ಕಾರದ ಯೋಜನೆಗಳು ಪಾರ್ಧೀಗಳನ್ನು ತಲುಪುತ್ತಿರಲಿಲ್ಲ ಎನ್ನುತ್ತಾರೆ, ಪರಿವರ್ತನೆಯ ಈ ಹೊಸ ಅಧ್ಯಾಯವನ್ನು ಬರೆದ ಅಲೆಮಾರಿ ಜನಾಂಗದ ಸಂಘಟನೆಯ ಮಾಲ್ವಾ ಪ್ರಾಂತದ ಪ್ರಮುಖರಾದ ರವಿ ಬುಂದೇಲಾ. ಮೊದಲು ಎಲ್ಲ ಪಾರ್ಧೀಗಳಿಗೆ ಆಧಾರ್ ಕಾರ್ಡ್ ಹಾಗೂ ಪಡಿತರ ಚೀಟಿ ಮಾಡಿಸಿಕೊಟ್ಟು ಅವರನ್ನು ಮುಖ್ಯವಾಹಿನಿಗೆ ಜೋಡಿಸಲಾಯಿತು. ಇಂದು ಆ ಪಾರ್ಧೀಗಳು ಅಚ್ಚರಿಯಾಗುವಷ್ಟು ಸ್ವಾಭಿಮಾನಿಗಳಾಗಿ ಬದುಕುತ್ತಿದ್ದಾರೆ.

ಕರೋನಾ ಕಾಲದಲ್ಲಿ ಮನೆಬಾಗಿಲಿಗೆ ಬಂದಿದ್ದ ಉಚಿತ ದಿನಸಿ ಸಾಮಾನುಗಳನ್ನು ಪಡೆಯಲು ನಿರಾಕರಿಸಿದ್ದು ಮಾತ್ರವಲ್ಲ, ಸಂತ್ರಸ್ತರಿಗೆ ದಿನಸಿ ತಲುಪಿಸುವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸೇವಾಕಾರ್ಯದಲ್ಲಿ ಪಾರ್ಧೀ ಯುವಕರೂ ಕೈಜೋಡಿಸಿದರು. ಕಾಲ್ಬೇಲಿಯಾ, ಪಾರ್ಧೀಗಡೋಲಿಯಾ ಎಂಬಿತ್ಯಾದಿ ಹೆಸರುಗಳಿಂದ ಗುರುತಿಸಿಕೊಂಡ ಅಲೆಮಾರಿ ಸಮಾಜವು ದೇಶಾದ್ಯಂತ ತಿಪ್ಪೆ ಹೆಕ್ಕುವ ಅಥವಾ ತಿರುಪೆ ಎತ್ತುವ ಮೂಲಕವೇ ಜೀವನ ನಡೆಸುತ್ತಿದ್ದಾರೆ. ಅಲೆಮಾರಿಗಳ ಬಾಳನ್ನು ಹಸನುಗೊಳಿಸುವ ಕಾರ್ಯಕ್ಕೆ ಒದಗಿದ ಅಡ್ಡಿ ಆತಂಕಗಳು ಒಂದೆರಡಲ್ಲ. ತಮ್ಮದೇ ದೇಶವಾಸಿಗಳಿಂದ ಕೇವಲ ಅವಜ್ಞೆ, ತಾತ್ಸಾರ ಹಾಗೂ ಅವಮಾನಗಳಿಗೆ ತುತ್ತಾಗಿ ನೊಂದಿದ್ದ ಪಾರ್ಧೀಗಳು ತಮ್ಮ ಕೀಳರಿಮೆಯಿಂದಾಗಿ ಯಾರನ್ನೂ ನಂಬುವ ಸ್ಥಿತಿಯಲ್ಲಿ ಇರಲಿಲ್ಲ. ಹಾಗಾಗಿಯೇ ಅವರ ಮಕ್ಕಳಿಗಾಗಿ ನಡೆಸಲಾಗುತ್ತಿದ್ದ ಬಾಲ ಸಂಸ್ಕಾರ ಕೇಂದ್ರವನ್ನೂ ಮೂರು ಬಾರಿ ನಿಲ್ಲಿಸಬೇಕಾಗಿ ಬಂದಿತ್ತೆಂದರೆ ಪರಿಸ್ಥಿತಿಯ ಗಂಭೀರತೆಯ ಅರಿವಾದೀತು.

ಸಂಘದ ಕಾರ್ಯಕರ್ತರು ತಮ್ಮನ್ನು ಅಪಮಾನಿಸಲು ಬಂದವರಲ್ಲ, ತಮಗೆ ಸಹಾಯಹಸ್ತ ನೀಡಲು ಬಂದವರು ಎಂಬ ವಿಶ್ವಾಸ ಪಾರ್ಧೀಗಳಲ್ಲಿ ಕ್ರಮೇಣ ಮೂಡತೊಡಗಿತು. ಬಳಿಕ 50 ಪಾರ್ಧೀ ಕುಟುಂಬಗಳ ಪಟ್ಟಿ ಮಾಡಿ ಅವರಿಗೆಲ್ಲ ಆಧಾರ್ ಹಾಗೂ ರೇಶನ್ ಕಾರ್ಡುಗಳನ್ನು ನೀಡಲಾಯಿತು. ಉದ್ಯೋಗ ಖಾತರಿ ಹಾಗೂ ಇತರ ಗ್ರಾಮ ಪಂಚಾಯಿತಿ ಯೋಜನೆಗಳ ಅಡಿಯಲ್ಲಿ ಜಾಬ್ ಕಾರ್ಡ್ ನೀಡುವ ಮೂಲಕ ಅವರ ಎಂದಿನ ಭಿಕ್ಷಾಟನೆಯನ್ನು ಕೊನೆಗೊಳಿಸಿದ್ದಾಯಿತು. ಈಗ ಅವರೆಲ್ಲ ಪ್ರತಿದಿನವೂ ನಿಗದಿತವಾದ ಕೂಲಿಗೆಂದು ಹೊರಡುತ್ತಾರೆ.



ಎಲ್ಲದಕ್ಕೂ ಕಳಶವಿಟ್ಟಂತೆ, ಅದೇ ಸಮಯದಲ್ಲಿ ಜಾರಿಯಾದ ಪ್ರಧಾನಮಂತ್ರಿ ಆವಾಸ್ ಯೋಜನೆಯ ಲಾಭವೂ ಪಾರ್ಧೀಗಳಿಗೆ ದೊರಕಿತು. ಶತಮಾನಗಳ ನೆಲೆಯಿಲ್ಲದ ಅಲೆದಾಟ ಅಂತ್ಯವಾಗಿ, ತಮ್ಮದೇ ಸೂರಿನಡಿ ತಮ್ಮ ಗೌರವಾರ್ಹ ಬದುಕಿನ ಹೊಂಗನಸು ಕಟ್ಟುವ ಸಂತೋಷ ಪಾರ್ಧೀಗಳದಾಯಿತು. ಹಲವಾರು ವರ್ಷಗಳಿಂದ ಕಾತರಿಸುತ್ತಿದ್ದ ಕಂಗಳಲ್ಲಿ ನೆಮ್ಮದಿಯ ಬದುಕಿನ ಬೆಳಕು ಮಿಂಚುವಂತಾಯಿತು. ಸಂಪರ್ಕ ಸಂಖ್ಯೆ: ರವಿ ಬುಂದೇಲಾ – 8770119986

**ಸಂಪಾದಕೀಯ ಸಹಕಾರ:** ಪ್ರಕಾಶ್ ಮಲ್ಪೆ, ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ವಿನಯ್ ಕೃಷ್ಣ ಹೆಚ್.ವಿ., ರೂಪಶ್ರೀ ನಾಗರಾಜ್, ಸುಲಕ್ಷಣಾ ಶರ್ಮಾ

## ದಾಖಲೆಯ 2 ಲಕ್ಷ ಕೋಟಿ ರೂ ತಲುಪಿದ ಭಾರತದ ಸ್ಮಾರ್ಟ್‌ಫೋನ್ ರಫ್ತು

ಕಳೆದ ಆರ್ಥಿಕ ವರ್ಷದಲ್ಲಿ ಭಾರತದ ಸ್ಮಾರ್ಟ್‌ಫೋನ್ ರಫ್ತು ದಾಖಲೆಯ ಎರಡು ಲಕ್ಷ ಕೋಟಿ ರೂಪಾಯಿಗಳನ್ನು ತಲುಪಿದ್ದು, ಮಹತ್ವದ ಮೈಲಿಗಲ್ಲು ಸಾಧಿಸಿದೆ. ಕಳೆದ ಹಣಕಾಸು ವರ್ಷದ ಮೊದಲ ಹತ್ತು ತಿಂಗಳಲ್ಲಿ ಸ್ಮಾರ್ಟ್‌ಫೋನ್‌ಗಳು ಭಾರತದ ಅತಿದೊಡ್ಡ ರಫ್ತಾಗಿ ಹೊರಹೊಮ್ಮಿವೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವ ಅಶ್ವಿನಿ ವೈಷ್ಣವ್ ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. 2013–14ರಲ್ಲಿ ದೇಶದ ಸ್ಮಾರ್ಟ್‌ಫೋನ್ ರಫ್ತು 167ನೇ ಸ್ಥಾನದಲ್ಲಿತ್ತು ಮತ್ತು ಈಗ ಅದು ಮೊದಲ ಸ್ಥಾನಕ್ಕೆ ತಲುಪಿರುವ ಬಗ್ಗೆ ಸಚಿವರು ಹರ್ಷ ವ್ಯಕ್ತಪಡಿಸಿದ್ದಾರೆ.

## ಲೋಕೋಮೋಟಿವ್ ಉತ್ಪಾದನೆಯಲ್ಲಿ ಅಮೆರಿಕ, ಯುರೋಪ್ ಅನ್ನು ಹಿಂದಿಕ್ಕಿದೆ ಭಾರತ

2024–25ನೇ ಹಣಕಾಸು ವರ್ಷದಲ್ಲಿ ಭಾರತವು 1681 ಲೋಕೋಮೋಟಿವ್‌ಗಳನ್ನು ಉತ್ಪಾದಿಸುವ ಮೂಲಕ ಅಮೆರಿಕ ಮತ್ತು ಯುರೋಪ್ ಅನ್ನು ಹಿಂದಿಕ್ಕಿದೆ. ಹಿಂದಿನ 2023–24ನೇ ಹಣಕಾಸು ವರ್ಷದಲ್ಲಿ ಉತ್ಪಾದಿಸಲಾದ 1,472 ಲೋಕೋಮೋಟಿವ್‌ಗಳಿಗೆ ಹೋಲಿಸಿದರೆ ಇದು ಶೇಕಡಾ 19ರಷ್ಟು ಹೆಚ್ಚಳವಾಗಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ. ಈ ದಾಖಲೆಯ ಉತ್ಪಾದನೆಯು ದೇಶದಲ್ಲಿ ಲೋಕೋಮೋಟಿವ್ ಉತ್ಪಾದನೆಗೆ ಇದುವರೆಗಿನ ಅತ್ಯಧಿಕವಾಗಿದೆ, ಇದು ರೈಲ್ವೆ ಮೂಲಸೌಕರ್ಯ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಎಲ್ಲಾ ಘಟಕಗಳ ಗಮನಾರ್ಹ ಸಾಧನೆಗಳನ್ನು ಪ್ರತಿಬಿಂಬಿಸುತ್ತದೆ.2014 ರಿಂದ ಹತ್ತು ವರ್ಷಗಳಲ್ಲಿ 9,168 ಲೋಕೋಮೋಟಿವ್‌ಗಳನ್ನು ಉತ್ಪಾದಿಸುವ ಮೂಲಕ ಲೋಕೋಮೋಟಿವ್ ಉತ್ಪಾದನೆಯು ಗಮನಾರ್ಹ ಏರಿಕೆಯನ್ನು ಕಂಡಿದೆ ಎಂದು ಅದು ಹೇಳಿದೆ.

## ಆಂಧ್ರದ 20,000 ಬುಡಕಟ್ಟು ವಿದ್ಯಾರ್ಥಿಗಳಿಂದ 108 ಸೂರ್ಯ ನಮಸ್ಕಾರ: ಗಿನ್ನೆಸ್ ದಾಖಲೆ

ವಿಶ್ವ ಆರೋಗ್ಯ ದಿನದಂದು ಆಂಧ್ರದ ಅಲ್ಲೂರಿ ಸೀತಾರಾಮ ರಾಜು ಜಿಲ್ಲೆಯ ಅರಕು ಕಣಿವೆ ಪದವಿ ಕಾಲೇಜಿನಲ್ಲಿ 'ಯೋಗ – ಮಹಾ ಸೂರ್ಯವಂದನಂ' ಕಾರ್ಯಕ್ರಮದ ಭಾಗವಾಗಿ ಸುಮಾರು 20,000 ಬುಡಕಟ್ಟು ವಿದ್ಯಾರ್ಥಿಗಳು 5 ತಿಂಗಳುಗಳ ಕಾಲ ಅಭ್ಯಾಸ ಮಾಡಿ 108 ಸೂರ್ಯ ನಮಸ್ಕಾರಗಳನ್ನು ಪ್ರದರ್ಶಿಸಿ ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ವಿಶ್ವ ಆರೋಗ್ಯ ದಿನಾಚರಣೆಯ ಭಾಗವಾಗಿ ನಡೆದ ಈ ಕಾರ್ಯಕ್ರಮವನ್ನು ಲಂಡನ್ ವರ್ಲ್ಡ್ ರೆಕಾರ್ಡ್ಸ್ ಯೂನಿಯನ್‌ನ ವ್ಯವಸ್ಥಾಪಕಿ ಆಲಿಸ್ ರೆನಾಡ್ ಅವರು ಅಧಿಕೃತವಾಗಿ ಗುರುತಿಸಿ

# ಸಾಲುದ್ದದ ಸುದ್ದಿಗಳು



ದಾಖಲೆಯ ಪುಟ ಸೇರಿಸಿದರು, ಜಿಲ್ಲಾಧಿಕಾರಿ ದಿನೇಶ್ ಕುಮಾರ್ ಅವರಿಗೆ ಪ್ರಮಾಣಪತ್ರವನ್ನು ನೀಡಿದರು.

## ಮ್ಯಾನ್ಮಾರ್‌ಗೆ ಭಾರತದಿಂದ 50 ಟನ್ ಮಾನವೀಯ ನೆರವು

ಆಪರೇಷನ್ ಬ್ರಹ್ಮದ ಅಡಿಯಲ್ಲಿ ಐಎನ್‌ಎಸ್ ಸತ್ಪುರ ಮತ್ತು ಐಎನ್‌ಎಸ್ ಸಾವಿತ್ರಿ ಹೊತ್ತೊಯ್ದ 50 ಟನ್ ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ (ಎಚ್‌ಎಡಿಆರ್) ಸಾಮಗ್ರಿಗಳನ್ನು ಯಾಂಗೋನ್‌ನಲ್ಲಿ ಮ್ಯಾನ್ಮಾರ್ ಅಧಿಕಾರಿಗಳಿಗೆ ಹಸ್ತಾಂತರಿಸಲಾಯಿತು. ಪರಿಹಾರ ಸಾಮಗ್ರಿಗಳನ್ನು ಮ್ಯಾನ್ಮಾರ್‌ಗೆ ಭಾರತದ ರಾಯಭಾರಿ ಅಭಯ್ ಠಾಕೂರ್ ಅವರು ಹಸ್ತಾಂತರಿಸಿದರು. ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ, ಯಾಂಗೋನ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯು ತಿಳಿಸಿದೆ. ಈ ನಡುವೆ, ಕಳೆದ ವಾರ ಮ್ಯಾನ್ಮಾರ್‌ನಲ್ಲಿ ಸಂಭವಿಸಿದ 7.7 ತೀವ್ರತೆಯ ಭೂಕಂಪದಲ್ಲಿ ಸಾವನ್ನಪ್ಪಿದವರ ಸಂಖ್ಯೆ ಎರಡು ಸಾವಿರವನ್ನು ದಾಟಿದೆ. ಪ್ರಬಲ ಭೂಕಂಪದಲ್ಲಿ ಇಲ್ಲಿಯವರೆಗೆ 2,056ಕ್ಕೂ ಹೆಚ್ಚು ಜನರು



ಪ್ರಾಣ ಕಳೆದುಕೊಂಡಿದ್ದಾರೆ, ಆದರೆ 3,900ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ, 270 ಜನರು ಕಾಣೆಯಾಗಿದ್ದಾರೆ ಎಂದು ಮ್ಯಾನ್ಮಾರ್ ಮಿಲಿಟರಿ ನಾಯಕತ್ವ ತಿಳಿಸಿದೆ.

## ಮೊದಲ ಸ್ವದೇಶಿ ಎಂಆರ್‌ಐ ಸ್ಕ್ಯಾನ್ ಯಂತ್ರ ಪಡೆದ ಭಾರತ





ಭಾರತವು ತನ್ನ ಮೊದಲ ಸ್ವದೇಶಿ ನಿರ್ಮಿತ ಮ್ಯಾಗ್ನೆಟಿಕ್ ರೆಸೋನೆನ್ಸ್ ಇಮೇಜಿಂಗ್ (ಎಂಆರ್‌ಐ) ಸ್ಕ್ಯಾನರ್ ಪಡೆದುಕೊಂಡಿದೆ. ಇದನ್ನು ದೆಹಲಿಯ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ (ಎಐಐಎಂಎಸ್) ನಲ್ಲಿ ಕ್ಲಿನಿಕಲ್ ಪ್ರಯೋಗಗಳಿಗಾಗಿ ಅಳವಡಿಸಲು ನಿರ್ಧರಿಸಲಾಗಿದೆ. ಅಕ್ಟೋಬರ್ 2025ರ ವೇಳೆಗೆ ಮೌಲ್ಯಮಾಪನ ಮತ್ತು ಕ್ಲಿನಿಕಲ್ ಪ್ರಯೋಗಗಳಿಗಾಗಿ ಏಮ್ಸ್–ದೆಹಲಿಯಲ್ಲಿ ಸ್ಥಾಪಿಸಲಾಗುವ ಈ ಯಂತ್ರವು ರೋಗಿಗಳಿಗೆ ಎಂಆರ್‌ಐ ವೆಚ್ಚವನ್ನು ಸುಮಾರು ಶೇಕಡಾ 50 ರಷ್ಟು ಕಡಿಮೆ ಮಾಡುತ್ತದೆ ಎಂಬ ನಿರೀಕ್ಷೆ ಇದೆ. ವೆಚ್ಚವನ್ನು ಕಡಿಮೆ ಮಾಡುವುದರ ಜೊತೆಗೆ, ವಿದೇಶಿ ಆಮದುಗಳ ಮೇಲಿನ ಭಾರತದ ಅವಲಂಬನೆಯನ್ನು ಕಡಿಮೆ ಮಾಡುವುದು ಮತ್ತು ಎಂಆರ್‌ಐ ತಂತ್ರಜ್ಞಾನಕ್ಕೆ ಸಾರ್ವಜನಿಕ ಪ್ರವೇಶವನ್ನು ಸುಧಾರಿಸುವುದು ಈ ಸ್ಥಳೀಯ ಯಂತ್ರದ ಗುರಿಯಾಗಿದೆ.

# ನೀವು ಯಶಸ್ಸನ್ನು ಹೇಗೆ ನೋಡಬೇಕು ಎಂಬುದನ್ನು ಕಲಿಸುವ 2 ಕಥೆಗಳು

ಭಾರತದ ಅತ್ಯಂತ ಕ್ಲಿಷ್ಟಕರ ಪರೀಕ್ಷೆಗಳಲ್ಲಿ ಒಂದೆನಿಸಿದ ಯುಪಿಎಸ್‌ಸಿಯಲ್ಲಿ ಉತ್ತೀರ್ಣರಾಗಬೇಕೆನ್ನುವುದು ಲಕ್ಷಾಂತರ ಅಭ್ಯರ್ಥಿಗಳ ಕನಸು. ಆದರೆ ಯುಪಿಎಸ್‌ಸಿ ಹಿನ್ನಡೆಗಳನ್ನು ನಿವಾರಿಸಿಕೊಂಡು, ಕಾಜಲ್ ಶ್ರೀವಾಸ್ತವ ಮತ್ತು ವೇದಾ ಗೋಗಿನೇನಿ ಉದ್ಯಮಶೀಲತೆಯನ್ನು ಅಳವಡಿಸಿಕೊಳ್ಳುವ ಮೂಲಕ ತಮ್ಮ ಯಶಸ್ಸಿನ ಹಾದಿಗಳನ್ನು ಮರು ವ್ಯಾಖ್ಯಾನಿಸಿಕೊಂಡಿದ್ದಾರೆ. ವೇದಾ ಅವರ ಅರ್ಥ್‌ಫುಲ್ ಶಾರ್ಕ್ ಟ್ಯಾಂಕ್ ಪ್ರವರ್ಧಮಾನಕ್ಕೆ ಬಂದರೆ, ಕಾಜಲ್ ಅವರ ಕಲರಿಪಯಟ್ಟು ಕೇಂದ್ರಿತ ವೃತ್ತಿಜೀವನವು ಫಲನೀಡಿತು. ಯುಪಿಎಸ್‌ಸಿ ಪಾಸ್ ಮಾಡದಿರುವುದು ಬದುಕಿನ ಅಂತ್ಯವಲ್ಲ ಎಂದು ಈ ಇಬ್ಬರು ಯುವತಿಯರು ತೋರಿಸಿಕೊಟ್ಟಿದ್ದಾರೆ.

### ಕಾಜಲ್ ಶ್ರೀವಾಸ್ತವ, ಸ್ವದೇಶಿ ಸ್ಪೋರ್ಟ್ಸ್‌ವೇರ್ ಸಂಸ್ಥಾಪಕಿ

ಅಕ್ಟೋಬರ್ 24, 2020ರಂದು, ಕಾಜಲ್ ಅವರು ತಮ್ಮ ಆರನೇ ಮತ್ತು ಕೊನೆಯ ಪ್ರಯತ್ನದಲ್ಲಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ನಂತರ ಬದುಕನ್ನು ಅಂತ್ಯಗೊಳಿಸಲು ನಿರ್ಧರಿಸಿದರು. "ನಾನು ನನ್ನನ್ನು ಸಾಬೀತುಪಡಿಸಲು ತುಂಬಾ ದಣಿದಿದ್ದೆ. ನನಗೆ ತಕ್ಷಣ ಶಾಂತಿ ಬೇಕಿತ್ತು ಎಂದು ಆ ನಿರ್ಧಾರವನ್ನು ಕೈಗೊಂಡಿದ್ದೆ" ಎಂದು ಅವರು ನೆನಪಿಸಿಕೊಳ್ಳುತ್ತಾರೆ. ಅವರ ಸಹೋದರಿಯ ಸಮಯೋಚಿತ ಪ್ರೋತ್ಸಾಹವು ಅವರನ್ನು ಸಂಕಷ್ಟದ



ಅಂಚಿನಿಂದ ಹಿಂದೆಗೆದು, ಯುಪಿಎಸ್‌ಸಿಯಲ್ಲಿ ವಿಫಲವಾದರೆ ಜೀವನದಲ್ಲಿ ವಿಫಲರಾಗುವುದಿಲ್ಲ ಎಂದು ಅವರಿಗೆ ನೆನಪಿಸಿತು.

2017ರಲ್ಲಿ ಅವರು ಪ್ರಾಚೀನ ಭಾರತೀಯ ಸಮರ ಕಲೆಯಾದ ಕಲರಿಪಯಟ್ಟು ಅಭ್ಯಾಸದಿಂದ ಅವರ ಜೀವನಕ್ಕೆ ಮಹತ್ವದ ತಿರುವು ಸಿಕ್ಕಿತು. "ಈ ಕಲೆಯನ್ನು ಅಭ್ಯಾಸವು ಕುಗ್ಗಿಹೋದ ನನ್ನನ್ನು ಗುಣಪಡಿಸುತ್ತಿತ್ತು. ಅದು ಅದ್ಭುತವಾಗಿತ್ತು" ಎಂದು ಅವರು ಹೇಳುತ್ತಾರೆ. ಕಾಜಲ್ ಕಲರಿಪಯಟ್ಟುವನ್ನು ಚೆನ್ನಾಗಿ ಕಲಿತರು. ತವಾಸಿ ಆಂದೋಲನವನ್ನು ಪ್ರಾರಂಭಿಸಿದರು. ಅದರ ಅಡಿಯಲ್ಲಿ ಅವರು ಕಲೆಯನ್ನು ಉತ್ತೇಜಿಸಲು ಕಾರ್ಯಾಗಾರಗಳನ್ನು ನಡೆಸುತ್ತಾರೆ ಮತ್ತು ಮಾನಸಿಕ ಆಘಾತದಿಂದ ಬಳಲುತ್ತಿರುವ 2,000ಕ್ಕೂ ಹೆಚ್ಚು ಜನರು ಸಾಂತ್ವನವನ್ನು ಕಂಡುಕೊಳ್ಳಲು ಸಹಾಯ ಮಾಡಿದ್ದಾರೆ.

ಇದರ ಜೊತೆಗೆ, ಅವರು ಉದ್ಯಮದಲ್ಲಿ ತೊಡಗಿಕೊಂಡರು. ನೈಸರ್ಗಿಕ ಉಡುಪುಗಳ ಮೇಲೆ ಕೇಂದ್ರೀಕರಿಸಿದ ಸ್ವದೇಶಿ ಬ್ರ್ಯಾಂಡ್ ಸ್ವದೇಶಿ ಸ್ಪೋರ್ಟ್ಸ್ ವೇರ್ ಅನ್ನು ಸ್ಥಾಪಿಸಿದರು. ಈ ಹೊಸ ಮಾರ್ಗವು ಕಾಜಲ್ ಅವರ ಜೀವನಕ್ಕೆ ತೃಪ್ತಿ ಮತ್ತು ಹೊಸ ಉದ್ದೇಶದ ಪ್ರಜ್ಞೆಯನ್ನು ತಂದಿತು. ತನ್ನ ಪ್ರಯಾಣವನ್ನು ನೆನಪಿಸಿಕೊಳ್ಳುತ್ತಾ, "ನಾನು ನನ್ನನ್ನು ಬಿಟ್ಟುಕೊಡಲಿಲ್ಲ ಎಂಬ ಅಂಶದ ಬಗ್ಗೆ ಹೆಮ್ಮೆಪಡುತ್ತೇನೆ. ನಾನು ನನ್ನ ಜೀವನವನ್ನು ಮತ್ತೆ ಪ್ರಾರಂಭಿಸಿದೆ ಎಂದು ನನಗೆ ಸಂತೋಷವಾಗಿದೆ" ಎಂದು ಅವರು ಹೇಳುತ್ತಾರೆ.

### ವೇದಾ ಗೋಗಿನೇನಿ, ಅರ್ಥ್‌ಫುಲ್‌ನ ಸಂಸ್ಥಾಪಕರು

ವೇದಾ ಮುಂಬೈನ ಡಾಯ್ಚ ಬ್ಯಾಂಕಿನಲ್ಲಿ ಲಾಭದಾಯಕ ಹುದ್ದೆಯಲ್ಲಿ ಕೆಲಸ ಮಾಡುತ್ತಿದ್ದರು. ಲಂಡನ್‌ಗೆ ತೆರಳುವ ಅವಕಾಶ ಅವರ ಮುಂದೆ ಇತ್ತು. ಆದರೂ, 2015ರಲ್ಲಿ ಅವರು ತನ್ನ ಯುಪಿಎಸ್‌ಸಿ ಕನಸುಗಳನ್ನು ಮುಂದುವರಿಸಲು ಕೆಲಸಕ್ಕೆ ರಾಜೀನಾಮೆ ನೀಡಿದರು. ಹೈದರಾಬಾದ್‌ನಿಂದ ದೆಹಲಿಗೆ ಸ್ಥಳಾಂತರಗೊಂಡು ಪ್ರಾಮಾಣಿಕತೆಯಿಂದ ತಯಾರಿ ಆರಂಭಿಸಿದರು.

"ನನ್ನ ದುಡಿಮೆಯ ಉಳಿತಾಯದ ಹಣದ ಆಧಾರದ ಮೇಲೆ ನನ್ನ ಬದುಕು ಸಾಗಿಸಬೇಕಿತ್ತು. ನನ್ನ ರೂಮ್‌ಮೇಟ್‌ನೊಂದಿಗೆ ನಾನು 10 ಅಡಿ ಇಕ್ಕಟ್ಟಾದ ಕೋಣೆಯಲ್ಲಿ ಉಳಿಯಬೇಕಿತ್ತು. ಅದಕ್ಕೆ ನನಗೆ ತಿಂಗಳಿಗೆ 15,000 ರೂ. ವೆಚ್ಚವಾಗುತ್ತಿತ್ತು. ದೆಹಲಿಯಲ್ಲಿ ಆಕಾಂಕ್ಷಿಗಳ ಜೀವನ ಪರಿಸ್ಥಿತಿಗಳು ತುಂಬಾ ಕಳಪೆಯಾಗಿವೆ. ನಾನು ನನ್ನ ದಿನದ ಹೆಚ್ಚಿನ ಸಮಯವನ್ನು ಗ್ರಂಥಾಲಯದಲ್ಲಿ ಕಳೆಯುತ್ತಿದ್ದೆ" ಎಂದು ಅವರು ನೆನಪಿಸಿಕೊಳ್ಳುತ್ತಾರೆ. ನಾಲ್ಕು ಪ್ರಾಮಾಣಿಕ ಪ್ರಯತ್ನಗಳ ಹೊರತಾಗಿಯೂ ಮತ್ತು ಮೂರುವರೆ ವರ್ಷಗಳನ್ನು ತಯಾರಿಗಾಗಿ




ಮೀಸಲಿಟ್ಟಿದ್ದರೂ, ವೇದಾ ಯುಪಿಎಸಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಲು ಸಾಧ್ಯವಾಗಲಿಲ್ಲ.

ತನ್ನ ಯೋಗಕ್ಷೇಮದ ಮೇಲಿನ ಪರಿಣಾಮವನ್ನು ಗುರುತಿಸಿ ಮತ್ತು ತಾಯಿಯ ಸಲಹೆಯಿಂದ ಪ್ರೇರೇಪಿಸಲ್ಪಟ್ಟ ಅವರು ಪರೀಕ್ಷೆಯಿಂದ ಹಿಂದೆ ಸರಿಯಲು ನಿರ್ಧರಿಸಿದರು. 2019ರಲ್ಲಿ, ವೇದಾ ಅವರು ಅವರ ಸಹೋದರಿ ಸುಧಾ ಅವರೊಂದಿಗೆ 'ಅರ್ಥ್‌ಫುಲ್' ಎಂಬ ಸಸ್ಯ ಆಧಾರಿತ ಪೂರಕ ಕಂಪನಿಯನ್ನು ಸಹಸಂಸ್ಥಾಪಕಿಯಾಗಿ ಸ್ಥಾಪಿಸಿದರು. ಈ ಸ್ಟಾರ್ಟ್‌ಅಪ್ ಶಾರ್ಕ್ ಟ್ಯಾಂಕ್ ಇಂಡಿಯಾದಲ್ಲಿ ಗಮನಾರ್ಹ ಮನ್ನಣೆಯನ್ನು ಗಳಿಸಿತು. ಅಲ್ಲಿ ಅದು ರೂ. 75 ಲಕ್ಷ ಹೂಡಿಕೆಯನ್ನು ಪಡೆದುಕೊಂಡಿತು. ಇದು ಸಹ–ಸಂಸ್ಥಾಪಕಿಯಾಗಿ ಅವರ ಪ್ರಯಾಣದಲ್ಲಿ ಮಹತ್ವದ ಮೈಲಿಗಲ್ಲನ್ನು ಗುರುತಿಸಿತು.

ತನ್ನ ಯುಪಿಎಸ್‌ಸಿ ಅನುಭವವನ್ನು ಪ್ರತಿಬಿಂಬಿಸುತ್ತಾ, ವೇದಾಗೆ ಯಾವುದೇ ವಿಷಾದವಿಲ್ಲ. ಗ್ರಹಿಸಿದ ವೈಫಲ್ಯಗಳನ್ನು ಅಂತಿಮ ಬಿಂದುಗಳಾಗಿ ನೋಡುವ ಬದಲು ಮೆಟ್ಟಿಲುಗಳಾಗಿ ನೋಡುವುದಕ್ಕೆ ಅವರು ಒತ್ತು ನೀಡುತ್ತಾರೆ. "ವೈಫಲ್ಯಗಳ ಹಂತದಿಂದ ಹೊರಬರಲು ಮತ್ತು ಅದು ವೈಫಲ್ಯವಲ್ಲ ಎಂದು ಒಪ್ಪಿಕೊಳ್ಳಲು ಸಮಯ ತೆಗೆದುಕೊಳ್ಳುತ್ತದೆ. ನೀವು ನಿಮ್ಮ ಅಂತಿಮ ಗುರಿಯನ್ನು ನೀವು ಬಯಸುವ ಯಾವುದೇ ರೀತಿಯಲ್ಲಿ ಸಾಧಿಸಬಹುದು, ಆದರೆ ಒಬ್ಬ ವ್ಯಕ್ತಿಯಾಗಿ ನೀವು ಅದರಿಂದ ಚೇತರಿಸಿಕೊಳ್ಳಬೇಕು," ಎಂದು ಅವರು ಸಲಹೆ ನೀಡುತ್ತಾರೆ.

*ಮೂಲ: ದಿ ಬೆಟರ್ ಇಂಡಿಯಾ*

पुंगव PUNGAVA
# 74, Ranga Rao Road, Shankarapuram, Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th APRIL 2025
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2024-2026 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2024-26
FORTNIGHTLY 01-05-2025



## ಪದ್ಮ ಪುರಸ್ಕಾರ: ಜು. 31ರವರೆಗೆ ನಾಮನಿರ್ದೇಶನಕ್ಕೆ ಅವಕಾಶ




2026ರ ಗಣರಾಜ್ಯೋತ್ಸವದಂದು ಘೋಷಿಸಲಾಗುವ ಪದ್ಮ ಪ್ರಶಸ್ತಿಗಳ ನಾಮನಿರ್ದೇಶನಗಳು ಈ ವರ್ಷದ ಜುಲೈ 31 ರವರೆಗೆ ತೆರೆದಿರುತ್ತವೆ. ನಾಮನಿರ್ದೇಶನ ಪ್ರಕ್ರಿಯೆಯು ಮಾರ್ಚ್ 15 ರಂದು ಪ್ರಾರಂಭವಾಗಿದೆ. ಪದ್ಮ ಪ್ರಶಸ್ತಿಗಳಿಗೆ ನಾಮನಿರ್ದೇಶನಗಳು ಮತ್ತು ಶಿಫಾರಸುಗಳನ್ನು ರಾಷ್ಟ್ರೀಯ ಪುರಸ್ಕಾರ ಪೋರ್ಟಲ್‌ನಲ್ಲಿ ಆನ್‌ಲೈನ್‌ನಲ್ಲಿ ಮಾತ್ರ ಸ್ವೀಕರಿಸಲಾಗುತ್ತದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ. ಪದ್ಮ ಪ್ರಶಸ್ತಿಗಳು – ಪದ್ಮವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ – ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಸೇರಿವೆ. ಪ್ರಶಸ್ತಿಗಳು 'ವಿಶಿಷ್ಟ ಕೆಲಸ'ವನ್ನು ಮಾಡಿದ ವ್ಯಕ್ತಿಗಳನ್ನು ಗೌರವಿಸುತ್ತದೆ. ಕಲೆ, ಸಾಹಿತ್ಯ ಮತ್ತು ಶಿಕ್ಷಣ, ಕ್ರೀಡೆ, ವೈದ್ಯಕೀಯ, ಸಾಮಾಜಿಕ ಕಾರ್ಯ, ವಿಜ್ಞಾನ ಮತ್ತು ಎಂಜಿನಿಯರಿಂಗ್, ಸಾರ್ವಜನಿಕ ವ್ಯವಹಾರಗಳು, ನಾಗರಿಕ ಸೇವೆ ಮತ್ತು ವ್ಯಾಪಾರ ಮತ್ತು ಕೈಗಾರಿಕೆಗಳಂತಹ ಎಲ್ಲಾ ವಿಭಾಗಗಳಲ್ಲಿ ವಿಶಿಷ್ಟ ಮತ್ತು ಅಸಾಧಾರಣ ಸಾಧನೆಗಳಿಗಾಗಿ ಇದನ್ನು ನೀಡಲಾಗುತ್ತದೆ. ಜನಾಂಗ, ಉದ್ಯೋಗ, ಸ್ಥಾನ ಅಥವಾ ಲಿಂಗದ ಭೇದವಿಲ್ಲದೆ ಎಲ್ಲಾ ವ್ಯಕ್ತಿಗಳು ಪ್ರಶಸ್ತಿಗಳಿಗೆ ಅರ್ಹರು.

## ಮಧ್ಯಪ್ರದೇಶದ 19 ಧಾರ್ಮಿಕ ನಗರಗಳಲ್ಲಿ ಮದ್ಯ ನಿಷೇಧ

ಮಧ್ಯಪ್ರದೇಶ ಸರ್ಕಾರ ಉಜ್ಜಯಿನಿ, ಓಂಕಾರೇಶ್ವರ, ಮಹೇಶ್ವರ, ಚಿತ್ರಕೂಟ ಮತ್ತು ಮೈಹಾರ್ ಸೇರಿದಂತೆ ಮಧ್ಯಪ್ರದೇಶದ 19 ಧಾರ್ಮಿಕ ನಗರಗಳು ಮತ್ತು ಆಯ್ದ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯ ಪ್ರದೇಶಗಳಲ್ಲಿ ಮದ್ಯ ನಿಷೇಧ ಜಾರಿಗೆ ತಂದಿದೆ. ಈ ಪ್ರದೇಶದಲ್ಲಿನ ಎಲ್ಲಾ ಬಾರ್ ಮತ್ತು ವೈನ್‌ಶಾಪ್‌ಗಳು ಮುಚ್ಚಲ್ಪಟ್ಟಿವೆ. ಜನವರಿ 24ರಂದು ರಾಣಿ ಲೋಕಮಾತಾ ಅಹಲ್ಯಾಬಾಯಿ ಹೋಳ್ಕರ್ ಅವರ ಗೌರವಾರ್ಥ ಮಹೇಶ್ವರ ಪಟ್ಟಣದಲ್ಲಿ ನಡೆಸಿದ ಸಭೆಯಲ್ಲಿ ಸಚಿವ ಸಂಪುಟ ಈ ನಿರ್ಧಾರವನ್ನು ಅನುಮೋದಿಸಿತ್ತು. "ವ್ಯಸನ ಮುಕ್ತಿಯತ್ತ ಐತಿಹಾಸಿಕ ಹೆಜ್ಜೆ ಇಟ್ಟಿದ್ದೇವೆ, ಸಾರ್ವಜನಿಕ ನಂಬಿಕೆ ಮತ್ತು ಧಾರ್ಮಿಕ ಭಕ್ತಿಯನ್ನು ಗೌರವಿಸುವ ಸಲುವಾಗಿ ಈ ನಿರ್ಧಾರ ತೆಗೆದುಕೊಂಡಿದ್ದೇವೆ" ಎಂದು ಸಿಎಂ ಮೋಹನ್ ಯಾದವ್ ಹೇಳಿದ್ದಾರೆ. ಸರ್ಕಾರವು ಈ 19 ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು "ಸಂಪೂರ್ಣವಾಗಿ ಪವಿತ್ರ" ಪ್ರದೇಶಗಳೆಂದು ಘೋಷಿಸಿದೆ ಮತ್ತು ಅವುಗಳ ವ್ಯಾಪ್ತಿಯಲ್ಲಿ ಮದ್ಯದ ಮೇಲೆ ಸಂಪೂರ್ಣ ನಿಷೇಧ ಹೇರಿದೆ. ಯಾದವ್ ಹೇಳಿಕೆಯಲ್ಲಿ "ಸರ್ಕಾರವು ವ್ಯಸನ ಮುಕ್ತಿಯತ್ತ ಐತಿಹಾಸಿಕ ಹೆಜ್ಜೆ ಇಟ್ಟಿದೆ ಮತ್ತು ಈ ನಗರಗಳು ಮತ್ತು ಗ್ರಾಮೀಣ ಪ್ರದೇಶಗಳಿಗೆ ಸಂಬಂಧಿಸಿದ ಸಾರ್ವಜನಿಕ ನಂಬಿಕೆ ಮತ್ತು ಧಾರ್ಮಿಕ ಭಕ್ತಿಗೆ ಅನುಗುಣವಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ" ಎಂದು ಉಲ್ಲೇಖಿಸಿದ್ದಾರೆ. ಮದ್ಯ ನಿಷೇಧ ಜಾರಿಗೆ ಬರುವ ಧಾರ್ಮಿಕ ಸ್ಥಳಗಳು ಒಂದು ಪುರಸಭೆ, 12 ಪುರಸಭೆಗಳು ಮತ್ತು ಸಮಾನ ಸಂಖ್ಯೆಯ ಗ್ರಾಮ ಪಂಚಾಯತ್‌ಗಳಲ್ಲಿ ಹರಡಿವೆ. ಇವುಗಳಲ್ಲಿ, ಉಜ್ಜಯಿನಿ ಶಿವನಿಗೆ ಅರ್ಪಿತವಾದ ಪ್ರಸಿದ್ಧ ಮಹಾಕಾಳ ದೇವಾಲಯವನ್ನು ಹೊಂದಿದೆ, ಅಮರಕಂಟಕ್ ನರ್ಮದಾ ನದಿಯ ಮೂಲವಾಗಿದೆ, ಇದನ್ನು ರಾಜ್ಯದ ಜೀವನಾಡಿ ಎಂದು ಪರಿಗಣಿಸಲಾಗಿದೆ.

## ಯುನೆಸ್ಕೋ ವಿಶ್ವ ನೋಂದಣಿ ಪಟ್ಟಿಗೆ ಭಗವದ್ಗೀತೆ, ನಾಟ್ಯಶಾಸ್ತ್ರ

ಪುರಾತನ ಭಾರತೀಯ ಗ್ರಂಥ ಭಗವದ್ಗೀತೆ ಮತ್ತು ನಾಟ್ಯಶಾಸ್ತ್ರವನ್ನು ಯುನೆಸ್ಕೋ ತನ್ನ ವಿಶ್ವ ನೋಂದಣಿ ಪಟ್ಟಿಯಲ್ಲಿ ಸೇರ್ಪಡೆ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ಈ ಬಗ್ಗೆ ಟ್ವೀಟ್ ಮಾಡಿದ್ದು, 'ಪ್ರಪಂಚದಾದ್ಯಂತದ ಪ್ರತಿಯೊಬ್ಬ ಭಾರತೀಯನಿಗೂ ಇದು ಹೆಮ್ಮೆಯ ಕ್ಷಣವಾಗಿದೆ. ಈ ಸೇರ್ಪಡೆ ನಮ್ಮ ಕಾಲಾತೀತ ಬುದ್ಧಿವಂತಿಕೆ ಮತ್ತು ಶ್ರೀಮಂತ ಸಂಸ್ಕೃತಿಯ ಜಾಗತಿಕ ಮನ್ನಣೆಯಾಗಿದೆ. ಗೀತೆ ಮತ್ತು ನಾಟ್ಯಶಾಸ್ತ್ರವು ಶತಮಾನಗಳಿಂದ ನಾಗರಿಕತೆಯ ಪ್ರಜ್ಞೆಯನ್ನು ಪೋಷಿಸಿವೆ. ಅದರ ಒಳನೋಟಗಳು ಜಗತ್ತಿಗೆ ಸ್ಫೂರ್ತಿ ನೀಡುತ್ತಲೇ ಇವೆ' ಎಂದು ಸಂತಸ ವ್ಯಕ್ತಪಡಿಸಿದ್ದಾರೆ. ಶ್ರೀಮದ್ ಭಗವದ್ಗೀತೆ ಮತ್ತು ಭರತ ಮುನಿಯವರ ನಾಟ್ಯಶಾಸ್ತ್ರವನ್ನು ಯುನೆಸ್ಕೋದ ಮೆಮೊರಿ ಆಫ್ ವರ್ಲ್ಡ್ ರಿಜಿಸ್ಟರ್‌ಗೆ ಸೇರ್ಪಡೆಗೊಳಿಸಿರುವ ಬಗ್ಗೆ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಈ ಘೋಷಣೆ ಮಾಡಿದ್ದು, ಅವರು ಇದನ್ನು "ಭಾರತದ ನಾಗರಿಕತೆಯ ಪರಂಪರೆಗೆ ಐತಿಹಾಸಿಕ ಕ್ಷಣ" ಎಂದು ಬಣ್ಣಿಸಿದ್ದಾರೆ.ಶ್ರೀಮದ್ ಭಗವದ್ಗೀತೆ  ಮತ್ತು ನಾಟ್ಯಶಾಸ್ತದ ಸೇರ್ಪಡೆಯೊಂದಿಗೆ ಭಾರತವು ಈಗ ಈ ಅಂತರರಾಷ್ಟ್ರೀಯ ನೋಂದಣಿಯಲ್ಲಿ 14 ನಮೂದುಗಳನ್ನು ಹೊಂದಿದಂತಾಗಿದೆ.

## ತಮಿಳುನಾಡು ದೇಗುಲದಲ್ಲಿ 150 ವರ್ಷ ಹಳೆಯ ವಾಲ್ಮೀಕಿ ರಾಮಾಯಣದ ತಾಳೆಗರಿ ಹಸ್ತಪ್ರತಿ ಪತ್ತೆ

ತಮಿಳುನಾಡಿನ ತಿರುಪತ್ತೂರು ಜಿಲ್ಲೆಯ ಕೊರಟ್ಟಿಯಲ್ಲಿರುವ ಕಲತೀಶ್ವರ ದೇವಾಲಯದಲ್ಲಿ ವಾಲ್ಮೀಕಿ ರಾಮಾಯಣ ಸುರುಳಿಯನ್ನು ಹೊಂದಿರುವ ಅಪರೂಪದ ತಾಳೆಗರಿ ಹಸ್ತಪ್ರತಿಗಳ ಸಂಗ್ರಹ ಪತ್ತೆಯಾಗಿದೆ. ದೇವಾಲಯದ ನವೀಕರಣದ ಸಮಯದಲ್ಲಿ ರಾಜಗೋಪುರದಲ್ಲಿ ಹುದುಗಿದ್ದ ಐದು ಬಂಡಲ್ ಪ್ರಾಚೀನ ಹಸ್ತಪ್ರತಿಗಳು ಪತ್ತೆಯಾಗಿವೆ. ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆಗೆ ತಕ್ಷಣವೇ ಈ ಬಗ್ಗೆ ಮಾಹಿತಿಯನ್ನು ನೀಡಲಾಗಿದ್ದು, ತಂಡವೊಂದು ಇದರ ಪರೀಕ್ಷೆ ನಡೆಸುತ್ತಿದೆ. ಐದು ಬಂಡಲ್‌ಗಳಲ್ಲಿ 2,075 ತಾಳೆಗರಿ ಹಸ್ತಪ್ರತಿಗಳು ಇವೆ ಎನ್ನಲಾಗಿದೆ. ಕೈಬರಹ ವಿಶ್ಲೇಷಣೆ ಮತ್ತು ಶೈಲಿಯ ಅಂಶಗಳ ಆಧಾರದ ಮೇಲೆ ಇದರ ಪಠ್ಯಗಳು 'ವಾಳಿ ಸುವಾದಿ' ಸಂಪ್ರದಾಯಕ್ಕೆ ಸೇರಿವೆ ಎಂದು ಅಂದಾಜಿಸಲಾಗಿದೆ. ಪತ್ತೆಯಾದ ಪಠ್ಯಗಳಲ್ಲಿ ಬಾಲ ಕಾಂಡ, ಅಯೋಧ್ಯಾ ಕಾಂಡ, ಅರಣ್ಯ ಕಾಂಡ, ಕಿಷ್ಕಿಂದಾ ಕಾಂಡ ಮತ್ತು ಸುಂದರ ಕಾಂಡ ಸೇರಿವೆ, ಆದರೆ ಯುದ್ಧ ಕಾಂಡ ಕಾಣೆಯಾಗಿದೆ. ಈ ಅಪರೂಪದ ತಾಳೆಗರಿಯು ಕಂಬ ರಾಮಾಯಣದ ಜೊತೆಗೆ ತಮಿಳುನಾಡಿನಲ್ಲಿ ವಾಲ್ಮೀಕಿ ರಾಮಾಯಣ ಅಸ್ತಿತ್ವದಲ್ಲಿದ್ದ ಐತಿಹಾಸಿಕ ಮಹತ್ವವನ್ನು ಸಾರಿ ಹೇಳುತ್ತದೆ.

ಈ ಹಸ್ತಪ್ರತಿಯನ್ನು ಸುಮಾರು 125 ವರ್ಷಗಳ ಹಿಂದೆ ಲಿಪ್ಯಂತರ ಮಾಡಲಾಗಿದೆ. ಆದರೆ, ಮೂಲ ವಸ್ತುವು ಸುಮಾರು 300 ವರ್ಷಗಳ ಹಿಂದಿನದು ಎಂದು ಅಂದಾಜಿಸಲಾಗಿದೆ. ಶ್ರೀ ರಾಮಾಯಣ ಕಥಾ ಎಂಬ ಶೀರ್ಷಿಕೆಯ ಹಸ್ತಪ್ರತಿಗಳು, ವಾಲ್ಮೀಕಿ ರಾಮಾಯಣದ ಹೆಚ್ಚು ವಿವರವಾದ ಪುನರಾವರ್ತನೆಯನ್ನು ಸಂವಾದ ಸ್ವರೂಪದಲ್ಲಿ ಪ್ರಸ್ತುತಪಡಿಸುತ್ತವೆ. ಇದು ಸಂಸ್ಕೃತ ಪ್ರಭಾವವಿಲ್ಲದ ಓದುಗರಿಗೆ ಹೆಚ್ಚು ಪ್ರವೇಶಿಸಬಹುದಾಗಿದೆ. ಇದರ ಅನೇಕ ಪುಟಗಳು ಕಾಲಾನಂತರದಲ್ಲಿ ಹದಗೆಟ್ಟಿವೆ, ದೀರ್ಘಕಾಲದ ಸಂಗ್ರಹಣೆಯಿಂದಾಗಿ ಶಿಲೀಂಧ್ರಗಳ ಬೆಳವಣಿಗೆ ಕಂಡುಬಂದಿದೆ. ರಾಸಾಯನಿಕ ಸಂರಕ್ಷಣೆ ಮತ್ತು ಶುಚಿಗೊಳಿಸುವಿಕೆ ಸೇರಿದಂತೆ ಪುನಃಸ್ಥಾಪನೆ ಪ್ರಯತ್ನಗಳು ನಡೆಯುತ್ತಿವೆ. ಸರ್ಕಾರಿ ಇಲಾಖೆಯಿಂದ ಅನುಮತಿ ದೊರೆತರೆ, ಈ ಪಠ್ಯಗಳನ್ನು ನಕಲು ಮಾಡಿ ಸಾರ್ವಜನಿಕ ಪ್ರವೇಶಕ್ಕಾಗಿ ಪ್ರಕಟಿಸಬಹುದು ಎಂದು ಸಂಶೋಧಕರು ನಂಬುತ್ತಾರೆ. ಈ ಅನ್ವೇಷಣೆಯು ವ್ಯಾಪಕವಾಗಿ ಪೂಜಿಸಲ್ಪಡುವ ಕಂಬ ರಾಮಾಯಣದ ಜೊತೆಗೆ ತಮಿಳುನಾಡಿನಲ್ಲಿ ವಾಲ್ಮೀಕಿ ರಾಮಾಯಣದ ಐತಿಹಾಸಿಕ ಮಹತ್ವವನ್ನು ಬಲಪಡಿಸುತ್ತದೆ. ಇದು ತಮಿಳು ಮನೆಗಳಲ್ಲಿ ವಾಲ್ಮೀಕಿಯ ಆವೃತ್ತಿಯನ್ನು ಪಠಿಸುವ ಸಂಪ್ರದಾಯವನ್ನು ಸಹ ಎತ್ತಿ ತೋರಿಸುತ್ತದೆ.

## ವಿಶ್ವದ ಎರಡನೇ ಅತಿದೊಡ್ಡ 5G ಮಾರುಕಟ್ಟೆಯಾದ ಭಾರತ

ಭಾರತ ಇಂದು ವಿಶ್ವದ ಎರಡನೇ ಅತಿದೊಡ್ಡ 5G ಮಾರುಕಟ್ಟೆಯಾಗಿದೆ ಎಂದು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ಹೇಳಿದ್ದಾರೆ. ಸರ್ಕಾರದ ಗಮನದಿಂದಾಗಿ ವಿವಿಧ ವಲಯಗಳು ಮೂಲಭೂತವಾಗಿ ರೂಪಾಂತರಗೊಳ್ಳುತ್ತಿವೆ. ವಿವಿಧ ವಲಯಗಳಲ್ಲಿ ಸುಮಾರು 11 ಲಕ್ಷ ಕೋಟಿ ಹೂಡಿಕೆಗಳನ್ನು ಮಾಡಲಾಗುತ್ತಿದೆ. ಈ ವರ್ಷ 1.6 ಬಿಲಿಯನ್ ಟನ್‌ಗಳೊಂದಿಗೆ ಭಾರತೀಯ ರೈಲ್ವೆ ಎರಡನೇ ಅತಿದೊಡ್ಡ ವಾಹಕವಾಗುತ್ತಿದೆ ಮತ್ತು ಬಂದರುಗಳು ಸಹ ಅಗಾಧ ವೇಗದಲ್ಲಿ ಬೆಳೆಯುತ್ತಿವೆ ಎಂದು ಸಚಿವರು ಪ್ರತಿಪಾದಿಸಿದರು. ಹತ್ತು ವರ್ಷಗಳ ಹಿಂದೆ ದೇಶದಲ್ಲಿ ಎಲೆಕ್ಟ್ರಾನಿಕ್ ಉತ್ಪಾದನೆಯು ನಗಣ್ಯವಾಗಿತ್ತು, ಆದರೆ ಇಂದು ಅದು ಪ್ರಮುಖ ರಫ್ತು ವಸ್ತುಗಳಲ್ಲಿ ಒಂದಾಗಿದೆ ಎಂದು ಅವರು ಉಲ್ಲೇಖಿಸಿದರು. ಕಳೆದ ಹತ್ತು ವರ್ಷಗಳಲ್ಲಿ ದೇಶದಲ್ಲಿ ವೈದ್ಯಕೀಯ ಕಾಲೇಜುಗಳು ಮತ್ತು ಐಐಟಿಗಳ ಸಂಖ್ಯೆ ದ್ವಿಗುಣಗೊಂಡಿದೆ ಎಂದು ಸಚಿವರು ಹೇಳಿದರು. ಇಡೀ ದಕ್ಷಿಣ ಮತ್ತು ಶ್ರೀಮಂತ ರಾಷ್ಟ್ರಗಳು ಭಾರತದ ಯುಪಿಐ ಪಾವತಿ ವ್ಯವಸ್ಥೆಯನ್ನು ಸ್ವೀಕರಿಸಲು ಸಿದ್ಧವಾಗಿವೆ. ಈ ವರ್ಷ ಭಾರತವು ಮೊದಲ 'ಮೇಡ್ ಇನ್ ಇಂಡಿಯಾ' ಚಿಪ್ ಅನ್ನು ಹೊರತರಲು ಯೋಜಿಸಿದೆ ಎಂದು ಸಚಿವರು ಘೋಷಿಸಿದರು.

## ತನ್ನ ಶಸ್ತ್ರಾಸ್ತ್ರಗಳನ್ನು ಮೇಲ್ದರ್ಜೆಗೇರಿಸಲು ಭಾರತೀಯ ಸೇನೆ ಸಜ್ಜು: ಮಹತ್ವದ ಒಪ್ಪಂದ



ಭಾರತೀಯ ಸೇನೆಯ ಕಾರ್ಯಾಚರಣೆಯ ಸನ್ನದ್ಧತೆಯನ್ನು ಹೆಚ್ಚಿಸಲು ರಕ್ಷಣಾ ಸಚಿವಾಲಯ ಬುಧವಾರ 155mm/52 ಕ್ಯಾಲಿಬರ್ ಅಡ್ವಾನ್ಸ್ಡ್ ಟೋವ್ಡ್ ಆರ್ಟಿಲರಿ ಗನ್ ಸಿಸ್ಟಮ್ಸ್ ಮತ್ತು ಹೈ ಮೊಬಿಲಿಟಿ ವೆಹಿಕಲ್ 6X6 ಗನ್ ಟೋವಿಂಗ್ ವೆಹಿಕಲ್‌ಗಳ ಖರೀದಿಗೆ ಒಪ್ಪಂದಗಳಿಗೆ ಸಹಿ ಹಾಕಿದೆ. ಸುಮಾರು 6900 ಕೋಟಿ ರೂಪಾಯಿಗಳ ಒಟ್ಟು ವೆಚ್ಚದಲ್ಲಿ ನವದೆಹಲಿಯಲ್ಲಿ ಭಾರತ್ ಫೋರ್ಜ್ ಲಿಮಿಟೆಡ್ ಮತ್ತು ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ ಲಿಮಿಟೆಡ್‌ನೊಂದಿಗೆ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಸಹಿ ಹಾಕುವುದರೊಂದಿಗೆ, ಪ್ರಸ್ತುತ ಹಣಕಾಸು ವರ್ಷ 2024–25 ರಲ್ಲಿ ಇಲ್ಲಿಯವರೆಗೆ ಬಂಡವಾಳ ಸಂಗ್ರಹಣೆಗಾಗಿ 1.40 ಲಕ್ಷ ಕೋಟಿ ರೂಪಾಯಿಗಳ ಒಟ್ಟು ಒಪ್ಪಂದಗಳಿಗೆ ಸಚಿವಾಲಯ ಸಹಿ ಹಾಕಿದೆ. 155mm/52 ಕ್ಯಾಲಿಬರ್ ATAGSಗಳು ವಿಂಟೇಜ್ ಮತ್ತು ಸಣ್ಣ ಕ್ಯಾಲಿಬರ್ ಗನ್‌ಗಳನ್ನು ಬದಲಾಯಿಸುತ್ತದೆ ಮತ್ತು ಭಾರತೀಯ ಸೇನೆಯ ಫಿರಂಗಿ ಸಾಮರ್ಥ್ಯಗಳನ್ನು ಹೆಚ್ಚಿಸುತ್ತದೆ. ಈ ಗನ್ ವ್ಯವಸ್ಥೆಯ ಖರೀದಿಯು ಆರ್ಟಿಲರಿ ರೆಜಿಮೆಂಟ್‌ಗಳ ಆಧುನೀಕರಣದಲ್ಲಿ ಮಹತ್ವದ ಮೈಲಿಗಲ್ಲನ್ನು ಗುರುತಿಸುತ್ತದೆ, ಕಾರ್ಯಾಚರಣೆಯ ಸನ್ನದ್ಧತೆಯನ್ನು ಹೆಚ್ಚಿಸುತ್ತದೆ. ಅಸಾಧಾರಣ ನಿಖರತೆಗೆ ಹೆಸರುವಾಸಿಯಾದ ATAGS, ನಿಖರ ಮತ್ತು ದೀರ್ಘ–ಶ್ರೇಣಿಯ ದಾಳಿಗಳನ್ನು ಸಕ್ರಿಯಗೊಳಿಸುವ ಮೂಲಕ ಸೈನ್ಯದ ಫೈರ್‌ಪವರ್ ಅನ್ನು ಬಲಪಡಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಇದು ಭಾರತೀಯ ಸೇನೆಯು ಖಾಸಗಿ ವಲಯದಿಂದ ಪಡೆದ ಬಂದೂಕುಗಳ ಮೊದಲ ಪ್ರಮುಖ ಖರೀದಿಯಾಗಿರುವುದರಿಂದ, ಈ ಯೋಜನೆಯು ವಿಶೇಷವಾಗಿ ಭಾರತೀಯ ಬಂದೂಕು ಉತ್ಪಾದನಾ ಉದ್ಯಮಕ್ಕೆ ಮತ್ತು ಒಟ್ಟಾರೆಯಾಗಿ ಸ್ಥಳೀಯ ರಕ್ಷಣಾ ಉತ್ಪಾದನಾ ಪರಿಸರ ವ್ಯವಸ್ಥೆಗೆ ಉತ್ತೇಜನ ನೀಡುತ್ತದೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 87225 52497 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.